ಶ್ರೀ ಸತ್ಯನಾರಾಯಣ ಕಥಾಮೃತ



ಗಮಕಿ ಆರ್. ಶಂಕರನಾರಾಯಣ್, ಎಂ.ಎ.

ಶ್ರೀ ಸತ್ಯನಾರಾಯಣ ಕಥಾಮೃತ

ಪೀಠಿಕೆ

ಶ್ರೀ ರಮಾವರ ಸಕಲ ಸುಗುಣಾ
ಧಾರ ಸಜ್ಜನ ನಿಕರ ರಕ್ಷಣ
ಧೀರ ನಿರುಪಮ ನೀರಜಾಂಬಕ ಕೋಮಲಾಕಾರ
ಚಾರು ವಿಲಸಿತ ವಿಗ್ರಹಾತ್ಮಕ
ವಾರಿಜಾಸನಜನಕ ದಾನವ
ವೈರಿ ನಿಡೆನ್ನಯ ಮನಸ್ಸಿಗೆ ಮಂಗಳೋತ್ಸವವ ೧

ಶಶಿಕಳಾಧರ ಶೂಲಪಾಣಿಯೆ
ವಶಿಕ ಶೌನಕ ಮೌನಿ ವಂದ್ಯನೆ
ನಿಶಿಚರಾಂತಕ ಭಕ್ತಪಾಲಕ ದಿವ್ಯಫಣಿಭೂಷ
ವಿಷಯ ವಿಸ್ತೃತಮಾಗಿ ಜನಮನ
ಕುಶಲದೇಳ್ಗೆಯ ಬಯಸಿ ರಚಿಸುವೆ
ಯಶವನಾಂತಾ ಸತ್ಯಚರಿತೆಗೆ ನೀಡು ಮಂಗಳವ ೨

ಶೇಷಪರ್ವತವಾಸ ಪಾಪ ವಿ
ನಾಶ ಕೌಸ್ತುಭಭೂಷ ಮುನಿಗಣ
ತೋಷ ರವಿಸಂಕಾಶ ಭಾವುಕ ನಿಕರ ಸಂತೋಷ
ಕ್ಲೇಶನಾಶನಗೈದು ಸುರುಚಿರ
ಭಾಷೆ ರಂಜಿಪ ತೆರದಿ ಕರುಣಿಪು
ದೀಶ ಸರ್ವೇಶ್ವರನೆ ವಿರಚಿಪ ಸತ್ಯಕಥೆಯಿದಕೆ ೩

ವಿಘ್ನಮಾರಕ ಭಯನಿವಾರಕ
ವಿಘ್ನನಾಯಕ ಮುಕ್ತಿದಾಯಕ
ವಿಘ್ನತಿಮಿರಕೆ ಮಿಹಿರ ಲೋಚನ ಶಕ್ತಿದಾತಾರ
ವಿಘ್ನಮಂ ಪರಿಹರಿಸಿ ಗುಣ ಸಂ
ಲಗ್ನತೆಯ ನೀ ನೀಡು ಕರುಣದಿ
ವಿಘ್ನಸೇನಾಚಾರ್ಯ ಮಣಿವೆನು ನಿನ್ನ ಪದಯುಗಕೆ ೪

ಸರಸಿಜೋದ್ಭವನರಸಿ ಮಾನಿನಿ
ವರದೆ ಶಾರದೆ ಕವಿಜನಸ್ತುತೆ
ಸರಸಪದ ಲಾಲಿತ್ಯದಾಯಿನಿ ದೇವಿ ಕಲ್ಯಾಣಿ
ಸರಸ ಮಧುರಾಲಾಪ ಕಾವ್ಯದಿ
ನೆರೆ ಮೆರೆವ ತೆರದಿಂದೆ ವಿರಚಿಪ
ವರವ ನೀಡುತಲೆನ್ನ ಪೊರೆವುದು ವಾಣಿ ಫಣಿವೇಣಿ ೫

ನೀರಜಾಂಬಕಿ ರಂಗನಾಯಕಿ
ನೀರಜಾಸನ ಮಾತೆ ಗುಣಯುತೆ
ಘೋರ ಪಾತಕನಾಶಿನಿಯೆ ನತಜನರ ರಕ್ಷಕಿಯೆ
ಮಾರಪಿತನರ್ಧಾಂಗಿ ಸರಸಿಜೆ
ಸಾರಿ ನುತಿಪೆನು ಭಕ್ತಿಯಿಂದಲಿ
ತೋರು ಮತಿಯನು ಸತ್ಯನಾರಾಯಣ ಕಥಾಕೃತಿಗೆ ೬

ಚಾರು ಮಂಗಳಗಾತ್ರೆ ಪಾರ್ವತಿ
ಸಾರಸಾಕ್ಷಿಯೆ ವಿಮಲೆ ಜಗದು
ದ್ಧಾರೆ ವರಕೈಲಾಸನಾಥಪ್ರಿಯಳೆ ಸಚ್ಚರಿತೆ
ಭೂರಿಕಾರುಣ್ಯದಲಿ ಲೀಲೆಯ
ತೋರಿ ನಡೆಸೌ ಸತ್ಯಕಥೆಯನು
ಸಾರವಹ ಸಂಪನ್ನ ಮತಿಯನು ತಾಯೆನಗೆ ತಾಯೆ ೭

ಸತ್ಯನಾರಾಯಣನೆ ತವ ಪದ
ಭೃತ್ಯ ಚರಿತಾಮೃತವ ಸವಿಯಲು
ನಿತ್ಯಪಾರಾಯಣಕೆ ದಯೆಗೈ ನಿನ್ನ ಗುಣಕಥೆಯ
ಸತ್ಯಭಾಮಾರಮಣ ನುತಿಸುವೆ
ನತ್ಯಧಿಕತರ ಭಕ್ತಿಭಾವದಿ
ಸತ್ಯಫಲವನು ನೀಡು ರಚಿಸಲು ನಿನ್ನ ಸತ್ಕೃತಿಯ ೮

ಆದಿಗುರು ಶಂಕರರ ಪೀಠದಿ
ಸಾದರದಿ ನೆಲಸಿರ್ದ ಶಿಷ್ಯರ
ಬೋಧಿಸುತ ದಯದಿಂದ ಶ್ರೇಯೋಮಾರ್ಗ ತೋರಿಸುತ
ಮೇದಿನಿಗೆ ಗುರುವೆನಿಸಿ ಮಾಯೆಯ
ಬಾಧೆ ಹೊದ್ದದ ತೆರದಿ ಪೊರೆಯುತ
ಮೋದವಡೆದಾಚಾರ್ಯರಿಂಗೆರಗುವೆನು ಭಕ್ತಿಯಲಿ ೯

ನಮಿಸುವೆನು ಶೃಂಗೇರಿಗಿದೊ ನಾ
ನಮಿಸುವೆನು ವರ ತುಂಗಭದ್ರೆಗೆ
ಅಮಮ ಆದಿ ವರಾಹ ದಂಷ್ಟ್ರೋದ್ಭೂತ ಪಾವನೆಗೆ
ನಮಿಪೆನಜನಾರ್ಧಾಂಗಿ ವರದೆಗೆ
ನಮಿಸುವೆನು ಶ್ರೀ ಚಂದ್ರಮೌಳಿಗೆ
ನಮಿಪೆ ವಿದ್ಯಾತೀರ್ಥ ಯತಿಪತಿ ಪರಮ ಗುರುವರಗೆ ೧೦

ವಿವಿಧ ರಸಭಾವಾರ್ಥಸಂಪದ
ವವನಿಜನವೋಲಯಿಪ ತೆರದಲಿ
ವಿವರಿಸುವ ಕವಿತಾಸುಪದ್ಧತಿಯೆನಗೆ ಕಾಣಿಸದು
ಸವಿಸವಿದು ಶ್ರೀ ಸತ್ಯಚರಿತೆಯ
ಲವಲವಿಕೆ ಮನದೊಳಗೆ ಪೆರ್ಚಿತು
ಕಿವಿಗೆ ಹಿತವಹುದೆಂದು ಪೇಳ್ದಿಹೆನೀ ಮಹಾಕಥೆಯ ೧೧

ಸುಜನರಿದನಾದರಿಸಿ ಕೇಳ್ವುದು
ಭಜಿಸಿ ನಲಿಯುವ ಸತ್ಯಕಥೆಯಿದು
ಭಜಕರಘ ಪರಿಹರಿಸಿ ಭಾಗ್ಯೋದಯವು ಸಮನಿಪುದು
ದ್ವಿಜಕುಲೋದ್ಭವ ಕುತ್ಸಗೋತ್ರಜ
ಸುಜನ ಶಂಕರನಾರಾಯಣ ಕವಿ
ಭುಜಗಶಯನನು ನಾರದಂಗೊರೆದುದನು ಪೇಳ್ದಿಹನು ೧೨

ಮಂದಭಾಗ್ಯನು ತಾನು ನಿಜದಲಿ
ನೊಂದ ಜೀವನು ಭವದ ಜಲಧಿಯ
ಲೊಂದೆ ಮನದಲಿ ಪೂಜಿಸುತ ವರ ಸತ್ಯನಾಥನನು
ಮಂದರೋದ್ಧರ ಹರಿಯ ಗುರುಕೃಪೆ
ಯಿಂದ ಬಲ್ಲಂದದಲಿ ಭಾವಿಸಿ
ಸಂದ ಸತ್ಕೃತಿಯಿದನು ರಚಿಸಿಹೆ ಸುಜನರಾಲಿಪುದು ೧೩

ಎಳೆಯ ತನದಲಿ ತಂದೆ ತಾಯ್ಗಳು
ನಲಿದು ನಲುಮೆಯ ವಿದ್ಯೆ ಕಲಿಸುತ
ಲಲಿತವಹ ಶ್ರೀರಾಮಕೃಷ್ಣರ ಚರಿತೆಗಳ ಪೇಳ್ದು
ಸಲಹಿದವರನು ನಮಿಸಿ ವಿನಯದಿ
ಕಲಿತ ವಿದ್ಯಾಸುಮವು ಶೋಭಿಸೆ
ನಲವನಾನುತ ಗುರುಹಿರಿಯರಿಗೆ ನಮಿಸಿ ನುತಿಸುವೆನು ೧೪

ವರಕುಮಾರವ್ಯಾಸ ಪಂಪರ
ಹರಿಹರನ ಲಕ್ಷ್ಮೀಶ ರಾಘವ
ಸರಸಕಾವ್ಯಾಮೃತದ ಲಹರಿಯ ನೋಡಿ ಮನಮೆಚ್ಚೆ
ದೊರೆತನಿತು ಜಾಣ್ಮೆಯಲಿ ಪೇಳ್ವೆನು
ಪರಮಪಾವನ ಪುಣ್ಯ ಕಥೆಯನು
ನಿರುತ ಮೆರೆಯಲಿ ಹರಿಯ ಕೃಪೆಯೊಳು ಜಗದೊಳೀ ಕೃತಿಯು ೧೫

ಪುಣ್ಯಕರವೀ ವ್ರತವು ಸುಲಭದ
ಲನ್ಯವಿನ್ನೊಂದಿಲ್ಲ ಕಾಣಲು
ಧನ್ಯರಪ್ಪರು ವ್ರತವ ಕೈಕೊಂಡವರು ಭಕ್ತಿಯಲಿ
ಅನ್ಯಭಾವಕೆ ಮನಗೊಡದ ಸಂ
ಪನ್ನರಿಗೆ ತೊಲಗುವುದು ಪೀಡೆಯು
ಬನ್ನ ಬವಣೆಗಳೆಲ್ಲ ನಾಶವು ನಂಬಿ ಮಾಳ್ಪರಿಗೆ ೧೬

* * *

ಕುಸುಮ ೧

ಸೂಚನೆ : ಧರೆಯ ಚರಿಸುತಲೊಮ್ಮೆ ಸುರಮುನಿ
ದುರಿತದೇಳ್ಗೆಯ ಕಂಡು ಭರದಲಿ
ಹರಿಗೆರಗಿ ವಿಸ್ತರಿಸಿ ತಿಳಿದನು ಸತ್ಯಚರಿತೆಯನು

ಶ್ರೀರಮಾಧವ ದೈತ್ಯಕುಲ ಸಂ
ಹಾರ ಮುನಿಮಾನಸ ಸರೋಜ ವಿ
ಹಾರ ಕಲುಷ ವಿದೂರ ಭವಹರ ನಮಿಪೆ ತವ ಪದಕೆ
ಚಾರು ಕವಿತೆಗೆ ನಿನ್ನ ಲೀಲಾ
ಭೂರಿ ಕಥನವನಿತ್ತು ಪೊರೆಯೈ
ಸಾರಸಾಕ್ಷನೆ ರಚಿಸೆ ತವ ಮಾಹಾತ್ಮ್ಯ ಚರಿತೆಯನು ೧

ಖ್ಯಾತ ಪೌರಾಣಿಕ ಶಿರೋಮಣಿ
ಸೂತ ಮುನಿಪತಿ ಸಂಚರಿಸಿ ಸಂ
ಪ್ರೀತಿಯಲಿ ಘನ ನೈಮಿಷಾರಣ್ಯಕ್ಕೆ ನಡೆತರಲು
ಆತನಿಗೆ ವರ ಶೌನಕಮುನಿ
ವ್ರಾತವಭ್ಯುತ್ಥಾನಮಂ ಗೈ
ದಾತುರದೆ ಕೇಳಿದುದು ಜಗದುದ್ಧಾರವೆಂತೆನುತ ೨

ವರ ತಪೋನಿಧಿ ರೋಮಹರ್ಷಿಣಿ
ಬರವಿನಿಂದಾನಂದವಾನುತೆ
ಕರಪುಟಾನತರಾಗಿ ಬೆಸಗೊಳೆ ಶೌನಕಾದಿಗಳು
ಧರೆಯ ಮನುಜಾವಳಿಯ ಘನತರ
ದುರಿತದಟವಿಯ ದಹಿಸಿ ಸಲಹುವ
ಕರಮೆಸೆವ ಸಾಧನಗಳನು ವರಸೂತನಿಂತೆಂದ ೩

ಕಲಿಯುಗ ಪ್ರಾರಂಭಮಿದು ಜನ
ರಲಸಿಕೆಯಲೇ ಮರೆದಿಹರು ಶ್ರೀ
ಜಲಜನಾಭ ಸ್ಮರಣೆಯನು ದುಷ್ಕರ್ಮರತರಾಗಿ
ಮುಳುಗಿಹರು ಪಾಪಾಂಬು ಕೂಪದಿ
ಹೊಲಬುಗೆಟ್ಟಿಹುದೀ ಧರಾತಲ
ಲಲಿತಮಾರ್ಗವನರುಹಬೇಕೆನೆ ಸೂತನಿಂತೆಂದ ೪

ಅವಧರಿಸಿ ಮುನಿವರರೆ, ಪೂರ್ವದಿ
ಭುವನ ಕುಕ್ಷಿಯು ತಾನು ವನರುಹ
ಭವ ತನಯನಿಗೆ ಸಾನುರಾಗದಲೊರೆದ ವರ ಕಥೆಯ
ಹವಣರಿತು ಪೇಳುವೆನೊಲವಿನಲಿ
ತವಕಿಸದೆ ಸಾದರದಿ ಕೇಳ್ವುದು
ಭುವನವಂದಿತ ಸತ್ಯದೇವನ ಪುಣ್ಯಚರಿತೆಯನು ೫

ಪರಮ ಭಾಗವತೋತ್ತಮನೆನಿಸಿ
ಕರಮೆಸೆವ ಮಹತಿಯನು ಕರದೊಳು
ಧರಿಸಿ ಶ್ರೀಹರಿ ಸಂಸ್ಮರಣೆಯೊಳು ಸಕಲ ಭುವನಗಳ
ಚರಿಸಿ ಬಳಿಕೀ ಧರೆಗೆ ತಾಂ ಬರು
ಬರುತ ಕಂಡನು ದುರಿತರಾಶಿಯ
ನುರೆ ಸಖೇದಾಶ್ಚರ್ಯಮಾನಸನಾಗುತರೆಗಳಿಗೆ ೬

ಏನಿದೇನಿದು ಲೋಕವೀ ಪರಿ
ಮಾಣನಿಯಮಗಳೆಲ್ಲ ತೊರೆಯುತ
ಬೇನೆಗೊಂಡಿರ್ಪುದು ತಳೆದು ದುಮ್ಮಾನ ದುರಿತಗಳ
ಮಾನನಿಧಿ ವೈಕುಂಠ ಪತಿಯೇ
ಸಾನುರಾಗದಿ ಪೊರೆಯಲಹುದು ನಿ
ದಾನದಲಿ ಪರಿಕಿಸಲೆನುತ ನಾರದನು ಮುಂಬರಿದ ೭

ಅಲ್ಲಿಯೊಂದೆಡೆ ಕುಟಿಲವರ್ತನೆ
ಯಿಲ್ಲಿಯೊಂದೆಡೆ ಕುಮನ ಕುತ್ಸಿತ
ರಲ್ಲಿಯೊಂದೆಡೆ ಠೌಳಿತನದಲ್ಲಿರ್ಪವರ ಕಂಡು
ಮೆಲ್ಲಮೆಲ್ಲನೆ ಸಾಗುತಲ್ಲಿಂ
ದಿಲ್ಲಿ ಬಿಡದೆಯೆ ಚಡಪಡಿಸುತಲಿ
ನಿಲ್ಲಲಾರದೆ ಕಾಲ್ತೆಗೆದನುರೆ ಭೀತಿಭಾವದಲಿ ೮

ಮುಂಬರಿದು ಮನಕತದೆ ಬರೆವರೆ
ಯಿಂಬರಿಯದಾ ಶ್ರೀ ರಮೇಶನ
ಬೆಂಬಿಡದೆ ನೆನೆಯುತ್ತ ಮಾರ್ಗದಿ ಮರಳಿ ನೋಡಿದನು
ಡಂಬತನವನು ತಾಳ್ದ ಕುಜನರು
ಸೊಂಬತನದಲಿ ಮಾಳ್ಪ ದುರಿತಾ
ಡಂಬರವ ನೆರೆ ಕಂಡು ಮಮ್ಮಲ ಮರುಗಿ ಸೊರಗಿದನು ೯

ಪೆರವರೇಳ್ಗೆಗೆ ಮೆಚ್ಚದಿರ್ಪರ
ವರಸುಧರ್ಮವ ತೊರೆದವರ ಮೇಣ್
ಕರಣ ವಂಚಕರಾಗುತೊಳತೋಟಿಯೊಳು ಸೆಣಸಾಡಿ
ವರ ಹರಿಸ್ಮರಣೆಯನು ಮರೆಯುತ
ತರತರದ ದುಷ್ಕೃತ್ಯವೆಸಗುತ
ಲುರೆ ಮದಿಸಿ ಮಾತ್ಸರ್ಯದಿಂದಿರ್ಪವರನೀಕ್ಷಿಸಿದ ೧೦

ಗದ್ದೆ ಹೊಲ ತೋಟಂಗಳಿಗೆ ಮಳೆ
ಸುದ್ದಿಯಿಲ್ಲವು ಭೂತಳವು ಸಿಡಿ
ದೆದ್ದು ಭೂಮಿಯ ಬೆಳೆಯ ಕಿಡಿಸುತೆ ರೋಗರುಜಿನಗಳ
ಹೊದ್ದಿ ಕುಜನರು ನರಳಿ ಮೈಮರೆ
ತಿದ್ದರಿತ್ತ ಹರಿಸ್ಮರಣೆಯೊಳ
ಗಿದ್ದಿತೈ ಸಜ್ಜನ ನಿಕರ ಯೋಚಿಸುತ ನಿಷ್ಕೃತಿಯ ೧೧

ಇಂತು ಬರುತಿರೆ ಮಾರ್ಗದಲಿ ತಾ
ನಿಂತು ಕಂಡನು ಚಣದಲದ್ಭುತ
ಚಿಂತನಾತೀತವಹ ವೈಚಿತ್ರ್ಯತರ ಘಟನೆಗಳ
ಸಂತಪಿಸಿ ತನ್ನೊಳು ಪರಿಪರಿಯ
ಲೆಂತಿದಕೆ ನಿಷ್ಕೃತಿಯೆನುತ್ತಲಿ
ಕಂತುಪಿತನನು ನೆನೆದು ಮನದಲಿ ಸೈವರಿದನಾಗ ೧೨

ಸತಿಪತಿಗಳಲಿ ವೈಮನಸ್ಯ ಸ
ತತ ಜಗಳ ಸೊಸೆಯತ್ತೆಯರಲಿ ನಿ
ರುತವು ಹಗೆ ಸಿರಿಮದದಿ ಜನಕ ತನೂಜರಲಿ ಸೆಟೆದು
ಕ್ಷಿತಿಯೊಳೀ ಪರಿ ಕ್ರೂರ ಕರ್ಮಗ
ಳತಿಶಯದೊಳಿರಲೆಂತು ನಲಿವರು
ವಿತತ ಭೂಮಿಯ ಜನಗಳೀ ಪರಿಯೆಂದು ಮುಂಬರಿದ ೧೩

ಭೂರಮೆಯು ಮುದುಡಿಯೆ ಸೊರಗಿ ಭೂ
ಭಾರವಣೆಯಲಿ ಪಾವಕನು ಸಾ
ಕಾರಗೊಂಡನು ಶುಷ್ಕಭೂರುಹ ಕಾಷ್ಠ ಪರಿಯಂತ
ಮಾರುತನದಾರ್ಭಟವು ಬಿರುಸೆನೆ
ಪಾರುಗಾಣಿಸಲಿದನು ಚಿಂತಿಸಿ
ನಾರದನು ಪೊರಮಟ್ಟ ಭರದಲಿ ಹರಿಯ ಪುರವರಕೆ ೧೪

ಅಲ್ಲಿಯಾ ವೈಕುಂಠ ಪುರದಲಿ
ಫುಲ್ಲಲೋಚನ ದಿವ್ಯ ಸನ್ನಿಧಿ
ಯಲ್ಲಿ ನೆಲಸಿಹ ಭಕ್ತಕೋಟಿಯು ಭಾಗಧೇಯರಲ
ಪಲ್ಲವಿಸಿದ ಮುಖಾರವಿಂದ ಸ
ಮುಲ್ಲಸಿತ ಭಾವದಲಿ ಲಕ್ಷ್ಮೀ
ವಲ್ಲಭನ ಕೈವಾರಿಸುವರೈ ವೇದಘೋಷದಲಿ ೧೫

ಹತ್ತುತಲೆ ರಕ್ಕಸನ ಕೊಂದನ
ಮೃತ್ಯುಭೀತಿ ನಿವಾರಿಪಾತನ
ಪೆತ್ತಕೋರಿಕೆಗಳನು ಮನ್ನಿಸಿ ಪೊರೆದು ಕಾಯ್ವವನ
ಸತ್ತಗುರುಬಾಲಕನ ಪೊರೆದನ
ನಿತ್ಯನಿರ್ಮಲ ವಾಸುದೇವ
ಭೃತ್ಯರಿಗೆ ಭೃತ್ಯನಹ ದೇವನ ಸನಿಹಕೈತಂದ ೧೬

ಕ್ಷೀರವಾರಿಧಿಶಯನ ಘನ ಶೃಂ
ಗಾರ ಸಾಗರನಿಂದಿರಾವರ
ನೇರಿ ಮಲಗಿರಲಾದಿಶೇಷನ ಮೇಲೆ ಮುದದಿಂದ
ಕ್ಷೀರಸಾಗರ ಕನ್ಯೆ ತನ್ನಯ
ಚಾರು ಕರಪಲ್ಲವದಿ ಪದಸೇ
ವಾರತಿಯೊಳಿರೆ ಕಾಮಪಿತನತಿ ತುಷ್ಟಿಗೊಳುತಿರಲು ೧೭

ದೇವ ಗಂಧರ್ವರು ಗರುಡನುರೆ
ಭಾವ ಪರವಶರಾಗಿ ಮನದೊಳು
ತೀವಿದಾನಂದದಲಿ ಸುಮಧುರ ಕಂಠದಲಿ ಪಾಡೆ
ಸೇವೆ ಸಲ್ಲಿಸುತಿರ್ಪ ಭಕ್ತರ
ಭಾವಬಂಧುರ ಮಧುರ ವೀಕ್ಷಣೆಯಿಂ ವಿಲೋಕಿಸದ ೧೮

ಪೇರುರದೆ ಶ್ರೀವತ್ಸ ಚಿಹ್ನೆಯ
ಮಾರಮಣನಾಂತಿರ್ದು ಶೋಭಿಸೆ
ಕೋರಯಿಸುವಂತಾಯ್ತು ಕಣ್ಮನ ನೆರೆದ ಮನಿಗಣಕೆ
ಚಾರಣರು ವಿದ್ಯಾಧರರು ಪಾ
ದಾರವಿಂದಕೆ ಮಣಿದು ಬಳಿಕಾ
ತಾರಕ ಶ್ರೀಮಹಿಮೆಯನು ಪೊಗಳಿದರು ಕೈಮುಗಿದು ೧೯

ವಾಸವಾದ್ಯಮರಾಳಿ ವಂದಿತ
ಭಾಸುರಮುನಿವ್ರಜ ಸಮರ್ಚಿತ
ವಾಸುದೇವನು ವಿಮಲ ಮಧುರಸ್ಮಿತ ಕಟಾಕ್ಷದಲಿ
ವಾಸುಕಿಯ ಪರ್ಯಂಕದಲ್ಲಿರ
ಲೀಶ ಸನ್ನಿಧಿಯಲ್ಲಿ ಸುಮನೋ
ಲ್ಲಾಸದಲಿ ಶ್ರೀವನಿತೆಯಿರ್ದಳು ಚರಣ ಸೀಮೆಯಲಿ ೨೦

ವಿಶ್ವಮೋಹಕ ಸಂಜನಪಾಲಕ
ವಿಶ್ವಧಾರಣ ಮುರವಿದಾರಣ
ವಿಶ್ವತೋಷಣ ವಿಶ್ವಕಾರಣ ವಿಶ್ವತೋಮುಖನೆ
ವಿಶ್ವರಕ್ಷಕ ದನುಜಶಿಕ್ಷಕ
ವಿಶ್ವವಂದಿತ ಭಕ್ತಸೇವಿತ
ವಿಶ್ವರೂಪನೆ ಸಲಹು ಸಲಹೆಂದಮರಮುನಿಯೆಂದ ೨೧

ಆದಿಮಧ್ಯಾಂತ ರಹಿತ ನಿಖಿಳ
ವೇದ ಶಾಸ್ತ್ರಾಗಮ ಪುರಾಣೇ
ತ್ಯಾದಿನುತನಜಭವ ಸಮರ್ಚಿತ ಚರಣನಳಿನಯುಗ
ಆದಿಮೂರ್ತಿಯೆ ದೇವದೇವನೆ
ಆದಿನಾರಾಯಣನೆ ಪೊರೆ ನೀ
ನಾದರದೊಳೆನುತಭಿನಮಿಸಿ ಭಕ್ತಿಯಲಿ ನಾರದನು ೨೨

ಲೋಕಚೇತನ ಲೋಕಲೋಚನ
ಲೋಕಕರ್ಮನೆ ಲೋಕಧರ್ಮನೆ
ಲೋಕಪೋಷಕ ಮತಿವಿಧಾಯಕ ಲೋಕಪೂಜಿತನೆ
ಲೋಕಸುಂದರ ಭಾವಬಂಧುರ
ಲೋಕಕಾರಣ ಪಾಪಭಂಜನ
ಲೋಕವನನುಗ್ರಹಿಸು ದೇವ ಮಹಾನುಭಾವ ಹರೇ ೨೩

ನೀಲಮೇಘಶ್ಯಾಮ ಗೋಪೀ
ಬಾಲ ಗೋಪಾಲಕನೆ ನತಪರಿ
ಪಾಲ ಕರುಣಾಶೀಲ ಸುರಕುಲಪಾಲ ಶ್ರೀಲೋಲ
ಕಾಲಕಾಲ ವಿಶಾಲಹೃದಯನೆ
ಲೀಲೆಯಿಂದಲಿ ಜಗವ ಪೊರೆದವ
ನಾಲಿಸೆನ್ನಯ ನುಡಿಯ ಸರ್ವೋತ್ತಮ ಮುರಾರಿಯೆನೆ ೨೪

ಏನು ನಾರದ ಇತ್ತನೀಂ ಬರ
ಲೇನು ಕಾರಣ ಸದ್ವಿಚಾರವ
ದೇನಿಹುದು ನುಡಿಯದನು ರಸಮಯ ಸನ್ನಿವೇಶವೆನೆ
ಬಾನಿನೆತ್ತರಕಿಹುದು ಪೇಳ್ವೊಡ
ದೇನನೆಂಬೆನು ದೇವ ಭೂತಳ
ಹೀನ ವೃತ್ತಿಯಲಿಹುದು ಧರ್ಮಾಚರಣೆಗಳ ಮರೆತು ೨೫

ಪೇಳು ಪೇಳೆಲೆ ವತ್ಸ ನಾರದ
ಕಾಳುಗೊಂಡಿಹ ಧರೆಯ ನೀತಿಯ
ಜಾಲಗಳ ನಿರ್ಭೀತಿಯಿಂದಲಿ ಕಂಡ ದೃಶ್ಯಗಳ
ಬೀಳಹೊಯ್ವೆನು ಭರದೆ ತನ್ನಯ
ಲೀಲೆಯಿಂದಲಿ ತೀವಿರುವ ದು
ಶ್ಶೀಲ ರಾಶಿಗಳೇನದೆಂದನು ಹರಿಯು ಮುನಿವರಗೆ ೨೬

ಬಿನ್ನವಿಸಿದನು ದೇವಮುನಿ ಮಿಗೆ
ತನ್ನನುಭವದ ಸಾರ ಸಂಗತಿ
ಯುನ್ನತಿಕೆಯಲಿ ಧರೆಯ ದುಷ್ಕೃತ ರೂಪರೇಖೆಗಳ
ಇನ್ನು ಗತಿಯಾರುಂಟು ಮುರಹರ
ನಿನ್ನ ಬಿಟ್ಟರೆ ಮೂರು ಜಗದಲಿ
ಸನ್ನುತಾಂಗನೆ ಪೊರೆಯಬೇಕೀ ಧರೆಯನೆಂದೆನಲು ೨೭

ಮುರಮಥನ ಸಂತುಷ್ಟನಾಗುತ
ಪರಮ ಕರುಣಾ ಹೃದಯನಹೆ ನೀ
ನರೆ ನಿಮಿಷ ಕುಳ್ಳಿರದೆ ಸಂತತ ಪರರ ಸೌಖ್ಯದಲಿ
ಸುರರ ಚಿಂತೆಯಲಿರುವೆ ಮೇಣಾ
ನರರ ಭಾಗ್ಯದಲಿರುವೆ ನಿರುತವು
ಕರುಣೆಯೇ ನೆಲಸಿಹುದು ನಿನ್ನಲಿ ಕೇಳು ಕಥೆಯಿದನು ೨೮

ಎಂದು ಪರಟುವಿಸಿದನು ನರಹರಿ
ಯಂದು ಮಿಗೆ ನಗೆಸೂಸಿ ಪರಮಾ
ನಂದ ಹೃದಯದಿ ಸತ್ಯಕಥೆಯನು ಪುಣ್ಯಚರಿತೆಯನು
ಹಿಂದೆ ಬೃಂದಾರಕರು ನರರಾ
ನಂದದಿಂದಲಿ ಭಜಿಸಿ ಮೆರೆದರು
ಹೊಂದಿದರು ವರ ಪುಣ್ಯಲೋಕಗಳವರ ಪ್ರಾಪ್ತಿಯಲಿ ೨೯

ಈ ವರವ್ರತವನು ಚರಿಪ ಸುಜ
ನಾವಳಿಗೆ ಸೌಭಾಗ್ಯ ಸಂಪ
ದ್ಭಾವ ಸಂಮೋದಗಳಹವು ಸಂಕಲ್ಪಮಾತ್ರದಲಿ
ಬಾವಿಸಲ್ಕಿದು ಭವದ ಪರಿಹರ
ವಾವಕಾಲಕು ಸಕಲವಾಂಛಿತ
ವೀವುದೈ ಪರಿಹರಿಸಿ ಸರ್ವಾರಿಷ್ಟ ನಿಕರವನು ೩೦

ಕಾಲನೇಮವನೊಲಿದು ಪೇಳುವೆ
ನಾಲಯದಿ ನದಿ ತೀರದಲಿ ಗೋ
ಧೂಳಿ ಲಗ್ನದೊಳುದಯ ಮಧ್ಯಾಂತರದಿ ಸಂಜೆಯಲಿ
ಬಾಲವೃದ್ಧರು ಭಕ್ತಿಭಾವದೊ
ಳೋಲಗಿಸುತೀ ನೋಂಪಿಯನು ಸೌ
ಶೀಲತೆಯೊಳೆಸಗುವುದು ಬಲ್ಲಂದದಲಿ ಸಮ್ಮುದದೆ ೩೧

ಭೂಮಿಪಾಲರು ನೋಂಪಿಯಾಂತಡೆ
ಭೂಮಿ ಸಗ್ಗವಹುದು ಜಯಶ್ರೀ
ಧಾಮಮಪ್ಪುದು ವಿಪ್ರಗೈದೊಡೆ ಮೋಕ್ಷ ದೊರಕುವುದು
ನೇಮದಿಂ ವಾಣಿಜ್ಯ ವೃತ್ತಿಯ
ನಾಮಕಂ ವ್ರತದಿಂದ ಸಂಪತ್
ಕಾಮಿತಾರ್ಥವ ಪಡೆವನಿತರರು ಭಾಗ್ಯವಾನುವರು ೩೨

ಅಲ್ಲದೆಯು ನೀ ಕೇಳು ನಾರದ
ಸಲ್ಲಲಿತ ಸತ್ಯಾತ್ಮನೋಂಪಿಯ
ನುಲ್ಲಸದೆ ನಿಷ್ಠೆಯಲಿ ಗೈದೊಡೆ ಸಿದ್ಧಿ ದೊರಕುವುದು
ಪಲ್ಲವಿಸುವುದು ಧಾನ್ಯ ಧನಿಕತೆ
ಬಲ್ಲಿತಹ ಸುಖದುದಯವಪ್ಪುದು
ಫುಲ್ಲಲೋಚನ ಸತ್ಯನಾಥ ವ್ರತದ ಮಹಿಮೆಯಲಿ ೩೩

ಈ ವ್ರತವು ಪುಣ್ಯಪ್ರದಾಯಕ
ಈ ವ್ರತವು ಸಂಕಷ್ಟನಾಶನ
ವೀ ವ್ರತವ ಮಾಳ್ಪವರು ಸುಖಶಾಂತಿಗಳ ಪಡೆಯುವರು
ಈ ವ್ರತವ ನಾಲ್ಕಬುದ ಗೈಯುತ
ತೀವ್ರತೆಯಲುಜ್ಜವಣೆ ಮಾಡಿದೊ
ಡೀ ವ್ರತದ ಫಲ ಸಿದ್ಧಿಯಪ್ಪುದು ಮಂಗಳಪ್ರದವು ೩೪

ಕಮಲಸಂಭವ ಸುತನು ವಿನಯದಿ
ವಿಮಲಮಾನಸನಾಗಿ ಶ್ರೀವರ
ಮಮತೆಯಲಿ ಪೇಳೆನಗೆ ನಿನ್ನಯ ವ್ರತದ ಮಹಿಮೆಯನು
ವಿಮಲಹೃದಯನೆ ಪದ್ಮನಾಭನೆ
ನಮಿಸುವೆನು ತವ ಪಾದಸರಸಿಜ
ಕಮಿತಹರ್ಷದಿ ಕೇಳ್ವೆ ಪೇಳ್ವುದು ವಿಧಿ ವಿಶೇಷವನು ೩೫

ಆರಿದನು ಪೂರ್ವದಲಿ ಗೈದರ
ದಾರು ವಿಧ್ಯುಕ್ತದಲಿ ರಚಿಸಿದ
ರಾರು ಧನ್ಯತೆಯಾಂತು ಕಳೆದರು ಕಷ್ಟಕೋಟಿಗಳ
ಮೀರಿ ಬಹ ಬಾಧೆಗಳ ಬಂಬಳ
ತೂರಿ ಕಳೆದರದೆಂತು ಮನುಜರು
ಕೋರುವೆನು ಲೋಕೇಶ ಫಲವನು ಬೆಸಸಬೇಕೆಂದ ೩೬

ಆಚರಣೆಗಾವುದು ಸುಮಾರ್ಗವು
ಸೂಚಿಸೆನಲಜಸೂನು ಪಂಕಜ
ಲೋಚನನು ವ್ರತಕಥೆಗಳನು ನುಡಿಯಲಿಕೆ ಮನಗೈದು
ರೋಚಿಯಲಿ ಬೆಳಗುವುದು ಸಂಪದ
ಪೇಚಿನಲಿ ಸಿಲುಕಿದ ಮನುಜರು ವಿ
ಮೋಚನೆಯ ಕಾಣುವರು ಸರ್ವಾಭೀಷ್ಟ ಸಿದ್ಧಿಪುದು ೩೭

ವರ ವಸಂತದಿ ಮಾಘಮಾಸದಿ
ನಿರತಿಶಯ ಕಾರ್ತಿಕದ ಮಾಸದಿ
ನೆರೆದ ಹರಿವಾಸರದ ಮರುದಿನ ಹುಣ್ಣಿಮೆಯ ದಿನದಿ
ಪರಮ ಶುಭಕರ ಸತ್ಯನಾಥನ
ಸರಸಿಜೋಪಮ ಸತ್ಯಪಾದಕೆ
ಪರಮಭಕ್ತಿಯ ಚಿತ್ತವೃತ್ತಿಯ ವ್ರತವನರ್ಪಿಪುದು ೩೮

ಭಾನು ಶಶಿ ಕುಜ ಶುಕ್ರವಾರವು
ಸಾನುಕೂಲವು ವ್ರತವ ಗೈಯಲು
ಸಾನುರಾಗದೊಳಾಚರಿಸೆ ಸಿದ್ಧವದು ಸತ್ಫಲವು
ಆನುಕೂಲ್ಯವು ವೆತಿಯಪಾತವು
ಜಾನಿಸುವೊಡಿದು ಸಂಕ್ರಮಣ ವರ
ದಾನವಾಗಿಹುದರ್ಚಿಸಲು ವರ ಸತ್ಯದೇವನನು ೩೯

ಇಂದು ತಾರಾಬಲ ಸಮನ್ವಿತ
ದಿಂದ ಜೋಯಿಸರನುಮತಿಗಳಿಂ
ದಂದಮಿಗೆ ನಡೆಸುವುದು ಶ್ರದ್ಧಾಭಾವ ಶುದ್ಧಿಯಲಿ
ಸಂದ ಸನ್ಮಾರ್ಗದೊಳೆ ವರದ ಮು
ಕುಂದನನು ಸದ್ಭಾವದಿಂ ನೆನೆ
ದಂದು ವಿರಚಿಸಬೇಕು ಮನದಿಷ್ಟಾರ್ಥ ನೆರೆಯಲ್ಕೆ ೪೦

ವ್ರತದ ದಿನ ಮುಂಜಾನೆಯೊಳಗಾ
ವ್ರತಿಯು ತನ್ನಯ ಭಾರ್ಯೆಯೊಂದಿಗೆ
ಹಿತದಿ ನಡೆದೊಮ್ಮತದೆ ನದಿಯಾ ತೀರ್ಥದೊಳು ಮಿಂದು
ಪತಿತ ಪಾವನ ಸತ್ಯನಾಥನ
ನತಿಶಯದಿ ಸಂಸ್ಮರಿಸಿ ಚಿತ್ತದಿ
ಸತತ ಶುಭ್ರವಸನವ ಧರಿಸುತ ನೇಮಗಳ ಗೈದು ೪೧

ವಾರಿಯನು ನವತಾಮ್ರಕಳಶದಿ
ಪೂರಯಿಸಿ ಷೋಡಶ ವಿಧಾನದೊ
ಳಾರಯಿಸಿ ಭೇರೀ ಮೃದಂಗದ ನಾದ ವಿಭವದಲಿ
ನೀರಜಾಕ್ಷನ ನೆನೆದು ಮನೆಯನು
ಸೇರಿಯುನ್ನತವಾದ ಪೀಠದಿ
ವಾರಿಕುಂಭವನಿರಿಸಿ ಪೂಜಾದ್ರವ್ಯವನುಗೊಳಿಸಿ ೪೨

ಸಂಜೆ ವರ ಸತ್ಯಾತ್ಮಕನನುರೆ
ರಂಜಿಸುವ ಮಣಿಮಯದ ಪೀಠದೊ
ಳಂಜಲಿಯೊಳಭಿನಮಿಸಿ ಮಂತ್ರದ ಶುದ್ಧಿಯಿಂ ಮಣಿದು
ಮಂಜುಳ ಧ್ವನಿಗೈದು ಪರಮ ನಿ
ರಂಜನನ ಸಗುಣಾರ್ಚನೆಯನು ಸ
ಮಂಜಸದಿ ಸಂಕಲ್ಪಗೈವುದು ವಿಧಿಯ ನಿಯಮದಲಿ ೪೩

ಚೆಂದ ಧೌತಾಂಬರವ ಧರಿಸುತ
ಲಂದು ಪೂರ್ವದಿಶೆಯೊಳು ಗೋಮಯ
ದಿಂದ ತಲಪರಿಶುದ್ಧಿಯಂ ಗೈದಿರಿಸಿ ಮಂಟಪವ
ಒಂದು ಪೀಠವನಿರಿಸಿ ನಡುವಿನೊ
ಳೊಂದು ಪದ್ಮವ ರಚಿಸಿ ವಸನವ
ನೊಂದು ಮತ್ತೊಂದಿರಿಸಿ ಗೋದಿಯ ಹರಹುವುದು ನಲಿದು ೪೪

ಪ್ರಣವವನು ಲೇಖಿಸುತ ಮೇಗಡೆ
ಪ್ರಣವಮಂತ್ರದೆ ಪೂರ್ಣಕುಂಭವ
ನಣಿಗೊಳಿಸಿ ಮೇಲ್ ವ್ರೀಹಿ ಕುಂಭಸ್ಥಾಪನಂ ಗೈದು
ಕನಕ ಮೂರ್ತಿಯನಿರಿಸಿ ವೇದದ
ಘನಜಟಾದಿಯ ಪಠಿಸಿ ಮಣಿಯುತ
ಲನುನಯದಿ ಸಂಸ್ಥಾಪಿಸುವುದಾ ವೇದಮಂತ್ರದಲಿ ೪೫

ಇಷ್ಟಬಂಧು ಸುಮಿತ್ರ ವಿಪ್ರರ
ನಿಷ್ಟವೆರಸುತ ಗಣಪ ಗೌರಿಯ
ನಿಷ್ಠೆಯಲಿ ಸಂಕಲ್ಪಿಸುತ ವರುಣನ ತ್ರಿಮೂರ್ತಿಗಳ
ಅಷ್ಟದಿಕ್ಪ ನವಗ್ರಹಂಗಳ
ನಿಷ್ಠೆಯಲಿ ಸಂಪೂಜಿಸುತ ಸಂ
ತುಷ್ಟಿಸುತ್ತಾ ಕ್ಷೇತ್ರಪಾಲಕ ವಾಸ್ತುಪುರುಷರನು ೪೬

ವರಮಹಾಲಕ್ಷ್ಮೀ ಸಮೇತದ
ಲುರುವ ಕಲ್ಪೋಕ್ತದ ವಿಧಾನದಿ
ವರ ಕೃಪಾಕರ ಸತ್ಯನಾರಾಯಣನ ನಮಿಸುವುದು
ಕರಮೆಸೆವ ಪುಷ್ಪೋಪಚಯದಲಿ
ನೆರೆ ಮೆರೆವ ದೇವನನು ಪರಿಪರಿ
ದೊರೆತನಿತು ಕಾಲದಲಿ ಪೂಜಿಸಲಹುದು ಭಕ್ತಿಯಲಿ ೪೭

ಧೂಪ ದೀಪಾರತಿಯನೆತ್ತುತ
ಲಾ ಪರಿಯೆ ಭೂಸುರರಿಗೀವುದು
ತುಪ್ಪಸಕ್ಕರೆಪಾಲುರವೆ ಮಿಶ್ರಿಸಿ ಸಪಕ್ವದಲಿ
ರೂಪಿಸುವುದು ಸಪಾದ ಭಕ್ಷ್ಯವ
ನಾಪನಿತು ನೈವೇದ್ಯಗೈಯುತ
ಗೋಪರೂಪಂಗರ್ಪಿಸುತಲೀಯುವುದು ಭಕ್ತರಿಗೆ ೪೮

ಭಾವಶುದ್ಧಿಯಲರ್ಚಿಸುವುದಾ
ದೇವ ದೇವನ ಸತ್ಯಪುರುಷನ
ಮಾವು ಬಾಳೆಯ ಪಣ್ಗಳನು ತಂದರ್ಪಿಸುವುದಂದು
ಆವ ಪರಿಯಲಿ ಪೂಜೆಗೈಯಲು
ಸೇವೆಯಲಿ ಸಂತೃಪ್ತನಹ ರಾ
ಜೀವಲೋಚನ ಸತ್ಯದೇವನು ದೋಷಗಳ ಮರೆದು ೪೯

ಬಳಿಕ ಭೂದೇವಾದಿ ಸಕಲರು
ವೊಲಿಯೆ ಪಠಿಸುತೆ ಪುಣ್ಯಕಥೆಗಳ
ನಳಿನನಾಭನ ಲಬ್ಧ ದಿವ್ಯಸಪಾದ ಭಕ್ಷ್ಯವನು
ಸಲಿಸಿ ನೆರೆದಿಹ ಬಂಧು ಭಕ್ತಾ
ವಳಿಗೆ ಭೋಜನ ಗೈಸಿ ದಕ್ಷಿಣೆ
ಗಳ ಸುಗಂಧವ ಸುಮವ ತಾಂಬೂಲಾದಿಗಳನೊಲಿದು ೫೦

ನೃತ್ಯ ಗೀತಾದಿಗಳ ಮಾಡಿಸಿ
ನುತ್ಯ ವೇದೋಚ್ಚಾರ ಸಂಯುತ
ಸತ್ಯದೇವನ ಕೀರ್ತಿಗಳ ಕೊಂಡಾಡಿ ಪೊಗಳುವುದು
ಚಿತ್ತವಿಸಿ ಮುನಿಪೋತ್ತಮರೆ! ಬಳಿ
ಕಳ್ತಿಯಲಿ ಜಾಗರಣೆ ಮಾಡುತ
ಮತ್ತೆಯರುಣೋದಯಕೆ ಮುನ್ನವೆ ಮಿಂದು ಶುಚಿಯಾಗಿ ೫೧

ಬಳಿಕಲಾ ದೇವನ ವಿಸರ್ಜಿಸಿ
ಕಳಶ ವಸ್ತ್ರಸುಪೀಠ ಸಹಿತವೆ
ನಳಿನಲೋಚನ ಸತ್ಯನಾರಯಣನ ಮೂರ್ತಿಯನು
ಚೆಲುವ ದಕ್ಷಿಣೆಯೊಡನೆ ದಾನವ
ನೊಲಿದು ಭೂಸುರಗೀವುದಂತೆಯೆ
ಸಲೆ ಕರೆವ ಹಸುವನ್ನು ಕುಡುವುದು ಮತ್ತೆ ನಮಿಸುವುದು ೫೨

ಇಂತೊರೆದು ನಿಯಮಗಳ ಮುನಿಗಾ
ಕಂತುಪಿತನಾದರದಿ ವಿವರಿಸಿ
ಸಂತವಿಸಿ ಕಲಿಯುಗಕಿದೇ ವರಮುಕ್ತಿಸೋಪಾನ
ಚಿಂತೆಯಂ ಬಿಡು ಧರೆಗೆ ಬೋಧಿಸು
ಸಂತಸದಲೆಂದೆನುತ ಮುರಹರ
ಸಂತವಣೆಯಲಿ ಸುಜನರಘಹರಣಕಿದು ಸುಲಭವೆನೆ ೫೩

ನಾರದನ ಮುಖಕಮಲವರಳಿತು
ಸಾರಿ ಕೇಳಿದ ನಾಗಶಾಯಿಯ
ಘೋರ ದುರಿತಾವಳಿಯ ನೀಗುವುದೆಂತು ತಿಳುಹೆನಗೆ
ಸಾರ ಸುವಿಚಾರಗಳ ಪೂರ್ವದ
ಲಾರು ಗೈದರು ಸುಖವ ಪಡೆದರ
ದಾರು ಧನ್ಯತೆಯಾಂತರದ ಪೇಳೆನಲು ಹರಿಯೊರೆದ ೫೪

ಮುನಿಯೆ ಕೇಳೀ ವ್ರತವ ನಡೆಸಿದ
ರನಿಬರುಂ ಪರಭಕ್ತಿ ಮೋಕ್ಷವ
ನನುವಿನಿಂ ಪಡೆದವರು ಧರೆಯಲಿ ಭೋಗಭಾಗ್ಯಗಳ
ಅನುಭವಿಷರಿಷ್ಟಾರ್ಥಗಳ ಸಾ
ಧನೆಯೆಸಗಿ ಕಡೆಗೆನ್ನ ಸೇರ್ವರು
ಮುನಿಯೆ ಬೋಧಿಸು ಧರೆಯೊಳೆಂದಾ ಹರಿಯು ಮರೆಯಾದ ೫೫

* * *

ಕುಸುಮ ೨

ಸೂಚನೆ : ಏಸು ಪುಣ್ಯವ ಗೈದನೋ ಬಡ
ಭೂಸುರೋತ್ತಮ ಸಗ್ಗಕಡರಿದ
ವಾಸುದೇವನ ನೆನೆದು ವಿರಚಿಸಿ ಸತ್ಯನೋಂಪಿಯನು

ಸದಮಲಾತ್ಮನು ಪೇಳ್ದ ವಿವರವ
ನಧಿಕ ತೋಷದಿ ಕೇಳ್ದು ಮುನಿವರ
ರುದಿತಸದ್ಭಾವದಲಿ ಸೂತಗೆ ಮಣಿದು ಕೈ ಮುಗಿದು
ಸದಯ! ಪೇಳ್ವುದು ಸಕಲ ಕಥೆಗಳ
ನಿದನು ಪೂರ್ವದೆ ಗೈದರಾರೆಂ
ಬುದನು ತಿಳಿಸುತಲೆಮ್ಮ ಪೊರೆಯುವುದೆಂದರವರಂದು ೧

ಶೌನಕಾದಿ ಸಮಸ್ತ ಮುನಿಪರೆ!
ಸಾನುರಾಗದಿ ಕೇಳಿ ಕಥೆಗಳ
ಭಾನುಕೋಟಿಸುರೂಪ ಹರಿಚರಣದಲಿ ಸಂಜನಿಸಿ
ತಾನೆ ಶಶಿಧರ ಜಟೆಯ ಸೇರುತ
ನೂನ ಕಾಂತಿಯ ತಳೆದ ಗಂಗೆಯ
ತಾಣದಲಿ ನೆರೆ ಮೆರೆವ ಕಾಶೀಪುರವು ಶೋಭಿಪುದು ೨

ಅತ್ತ ಪರಿಸರದತ್ತ ವಾಸಿಸಿ
ರುತ್ತ ವಿಪ್ರೋತ್ತಮನು ಜೀವಿಸಿ
ರುತ್ತಲಿದ್ದನು ಪೆರ್ಚೆ ಬಡತನ ನವೆಯುತಲಿ ಮತ್ತೆ
ಲತ್ತೆ ಬಡಿದಂತವಗೆ ಹಸಿವಿನ
ಕುತ್ತವಡಸಿತು ಸುತ್ತಿ ಮನೆಮನೆ
ಯತ್ತ ಸೊರಗಿದ ಯಾಚನಾವೃತ್ತಿಯೊಳಗಾ ವಿಪ್ರ ೩

ಮಸೆದ ಕಡುಬಡತನದಿ ದುಃಖದೊ
ಳಶನ ವಸನಕೆ ಹೊಲಬುಗಾಣದೆ
ವಿಷಮಸಂಸಾರವನು ಸಾಗಿಸುತಿರ್ದನಾ ವಿಪ್ರ
ಬಸವಳಿದು ನಿಜವಿಧಿಗೆ ಚಿಂತಿಸಿ
ಕುಸಿದು ಕೂಳ್ಗುದಿಗೊಂಡು ವಿಪ್ರನು
ಕುಸುಮನಾಭನ ಚರಣಮಾತ್ರವನೇ ನೆನೆಯುತಿರ್ದ ೪

ಇವನನೀ ಪರಿ ತೊರೆದೆನಾದೊಡೆ
ಭುವನವಂದಿತ ಭುವನಪೋಷಕ
ಭುವನರಕ್ಷಕನೆಂಬ ಪೆಸರಾಂತೆನಗೆ ಫಲವೇನು?
ಭುವನಮೆನ್ನನು ಜರೆಯದಿಹುದೇ
ನಿವನ ಕಾವೆನೆನುತ್ತ ಹರಿ ತಾ
ನಿವನ ಸಂಕಟಗಳನು ಪರಿಹರಿಸಲ್ಕೆ ಮನಗೈದ ೫

ಪನ್ನಗಾರಿಧ್ವಜನು ಬಂದನು
ಬೆನ್ನ ಬಾಗಿಸಿ ತಲೆಯನಲುಗಿಸಿ
ತನ್ನ ಕೈಕಾಲುಗಳ ಕುಲುಕಿಸಿ ಹಿಡಿದ ಕೋಲೂರಿ
ಬಿನ್ನಣದೊಳತಿ ವೃದ್ಧ ವೇಷದಿ
ತನ್ನನೇ ನೆರೆ ನಂಬಿ ಚಿಂತಿಪ
ರನ್ನು ಕಾಯುವ ಬಿರುದು ಮೆರೆಸಲು ಬಡವನಾಲಯಕೆ ೬

ರಾಮ ರಾಮೆಂದೆನುತ ಮಲಗಿದ
ನೇಮ ವಿಪ್ರನ ಕಂಡು ತನ್ನಾ
ಭ್ರೂಮವೆತ್ತುತೆ ನೋಡಿ, ವಿಪ್ರನೆ! ನಿನ್ನ ಪರಿಯೇನು?
ಕಾಮಿತಾರ್ಥವದೇನು ಪೇಳ್ವೊಡೆ
ತಾಮರಸದಳನಯನ ಚರಣಕೆ
ನಾಮದನು ಬಿನ್ನವಿಸೆ ಶ್ರೀಹರಿಯೊಲಿಯಬಹುದೆಂದ ೭

ಬಿಚ್ಚೆಬಡವನು ನಾನು ಪೂಜ್ಯನೆ
ನಿಚ್ಚ ಬಿಚ್ಚೆಯನೆತ್ತಿ ನಡೆಸುವೆ
ನಚ್ಚು ಮೆಚ್ಚಲಿ ಕಠಿಣ ಸಂಸಾರವನು ತಿರುಗುತಲಿ
ಬಿಚ್ಚು ನುಡಿಯಲಿ ಸುಲಭಮಾರ್ಗವ
ನುಚ್ಚರಿಸೆನಗೆ ಭೂಮಿಯಮರನೆ
ಕಚ್ಚಿಕೊಂಡಿಹ ರುಜೆಯ ಬಡತನ ಕಳೆವುದೆಂತಾನು ೮

ಆಲಿಸಾದಡೆ ವಿಪ್ರ ಲಕ್ಷಿಸಿ
ಸಾಲುಗೊಂಡಿಹ ನಿನ್ನ ಬವಣೆಯು
ಬೀಳಲಹುದೈ ಪೂಜಿಸಲು ವರ ಸತ್ಯದೇವನನು
ತಾಳಿ ಮನದೊಳು ನಂಬು ನೀ ಶ್ರೀ
ಲೋಲನಾ ಪರವಾಸುದೇವನು
ಪಾಲಿಸುವನೀ ತಿರೆಯ ಕಾರುಣ್ಯಾವಲೋಕನದಿ ೯

ಪೂಜಿಸುವುದತಿಭಕ್ತಿಭಾವದ
ಲೋಜೆಯಿಂದಲಿ ಸತ್ಯಪುರುಷನ
ಮಾಜದೀಡೇರಿಸುವನಿಷ್ಟೆಯ ಹರಿಯ ನುಡಿಯರಿಯ
ಸಾಜಮಿದು ನೋಂಪಿಯನು ಗೈವುದು
ಭೂಜನರಿಗೊಲಿದಿಹನು ಕರುಣದಿ
ಸೋಜಿಗಮಿದೇನಲ್ಲ ಸಂದೆಗ ಬೇಡ ನಿನಗೆಂದ ೧೦

ಇಂತು ವೃದ್ಧನು ವ್ರತವಿಧಾನಗ
ಳಂತರಾರ್ಥವ ವಿಪ್ರಗರುಹುತ
ಮುಂತೆ ಮಂಗಳ ವರಶುಭೋದಯಮಹುದು ನಿನಗೆನುತ
ನಿಂತೆಡೆಯೆ ಕಣ್ಮರೆಯನಾಂತನ
ನಂತಶಾಯಿಯು ಸತ್ಯಪೂರುಷ
ನಂತರಿಸುತಾ ವೃದ್ಧ ವಿಪ್ರನ ವೇಷವಾ ಕ್ಷಣದಿ ೧೧

ಬಳಿಕಲಾ ದ್ವಿಜವರನು ಭರದೊಳು
ನಳಿನನಾಭನ ನೆನೆದು ಮನವರಿ
ದೊಲಿದು ಸಂಕಲ್ಪಿಸಿದನರ್ಚಿಸೆ ಸತ್ಯಕಾಮನನು
ಸುಲಭ ಸೂಕ್ಷ್ಮದೊಳಿರ್ಪುದೀ ವ್ರತ
ಸುಳಿದು ಮರುದಿನ ಮಾಳ್ಪೆ ತಾನೆಂ
ದುಲಿದು ಮಲಗಿದನಿರುಳು ಯೋಚಿಸಿ ಶಾಂತಚಿತ್ತದಲಿ ೧೨

ಮರುದಿವಸದೊಳ್ಮಿಂದು ಮಡಿಯು
ಟ್ಟಿರದೆ ಕಮಲಾಕಾಂತನಂ ಸಂ
ಸ್ಮರಿಸಿ ತೆರಳಿದ ನಯದೆ ಯಾಚನೆಗೈಯೆ ಮನೆಮನೆಗೆ
ಹರಿಯ ಕರುಣದಿ ನಾಲ್ಕುಮಡಿ ಶೇ
ಖರಣೆಯಾಯಿತು ವಿಧಿವಿಲಾಸದಿ
ಪರಮಹರ್ಷಿತನಾಗಿ ಸತ್ಯನ ನೆನೆದು ಭಕ್ತಿಯಲಿ ೧೩

ತರತರದ ಸುಮಪತ್ರದೂರ್ವೆಯ
ಪರಿಪರಿಯ ಫಲಭಕ್ಷ್ಯಭೋಜ್ಯವ
ನಿರಿಸಿ ವಿಪ್ರರ ಕರೆಸಿ ಬಾಂಧವಮಿತ್ರರೊಡಗೂಡಿ
ಪರಮ ಮಂತ್ರಂಗಳನು ಪಠಿಸುತೆ
ಕರದಿ ಕುಂಭವನಿಟ್ಟು ಪ್ರಣವದಿ
ಶಿರವು ಧರಣಿಗೆ ಸೋಂಕೆ ಮಣಿಯುತೆ ವಿಪ್ರನನುವಾದ ೧೪

ಜಯತು ಸತ್ಯಪದಾರವಿಂದಕೆ
ಜಯತು ಸತ್ಯಕರಾರವಿಂದಕೆ
ಜಯತು ಜಯ ಕಮಲಾಂಬೆ ವಾಸಿಪ ಹೃದಯಮಂದಿರಕೆ
ಜಯತು ಸತ್ಯಮುಖಾರವಿಂದಕೆ
ಜಯತು ಸತ್ಯಶಿರೋರುಭಾಗಕೆ
ಜಯತು ಜಯವೆಂದೆಂದು ಬೆಳಗಿದನಮಳ ದೀಪವನು ೧೫

ಚಂದದಾ ಮಂಡವಿಗೆಯೊಳು ಸಾ
ನಂದ ಮೂರ್ತಿಯ ನಿಲಿಸಿ ವಿನಯದಿ
ಕುಮದ ಕುಸುಮಾಕ್ಷತೆಯನರ್ಪಿಸಿ ಭಕ್ತಿಭಾವದಲಿ
ಹೆಂದದುತ್ಸಾಹದಲಿ ನಮಿಸುತ
ಸಂದಣಿಸಿದಾ ಭಕ್ತನಿವಹಕೆ
ಗಂಧ ಪುಷ್ಪಸಪಾದ ಭಕ್ಷ್ಯವನಿತ್ತನಾದರಿಸಿ ೧೬

ಇರಲಿರಲು ಕಾಲಾಂತರದೊಳಾ
ಧರಣಿಯಮರನು ಸತ್ಯದೇವನ
ಪರಮ ನೋಂಪಿಯ ಪೂರ್ಣಚಂದ್ರನ ದಿನದಲೆಸಗುತಿರೆ
ತರತರದ ಕಷ್ಟಗಳು ಸವೆದುವು
ನಿರುತ ಸೌಖ್ಯದ ಸುಗ್ಗಿಮೆರೆದುದು
ಪರಮ ಧಾರ್ಮಿಕನಾಗಿ ಮೆರೆದನು ಸತ್ಯನೊಲುಮೆಯಲಿ ೧೭

ಇಂತು ಸೂತನು ಕಥೆಯನುಸುರಲು
ಸಂತಸದಿ ಮುನಿವರರು ವಂದಿಸಿ
ಕುಂತುಪಿತ ವರ ಸತ್ಯನಾಥನ ಮಹಿಮೆಗಳು ಮೆರೆವ
ಸಂತ ಕಥೆಗಳ ಕಥಿಸಿ ನಲವಿಂ
ಚಿಂತೆಗಳ ಪರಿಹರಿಪುದೆನ್ನುತ
ನಂತ ಬಿನ್ನಹಗೈಯೆ ಸೂತನು ಪೇಳತೊಡಗಿದನು ೧೮

* * *

ಕುಸುಮ ೩

ಸೂಚನೆ : ವಿಪ್ರವರನಿಂ ಕಾಷ್ಠವಿಕ್ರಯಿ
ಸುಪ್ರಯೋಜನವಾಂತು ಸತ್ಯನ
ಸುಪ್ರಸನ್ನತೆವಡೆದ ನೋಂಪಿಯ ಗೈದು ಭಕ್ತಿಯಲಿ

ಶೌನಕಾದಿ ಸಮಸ್ತ ಮುನಿಗಳ
ನೂನ ಚಾರಿತ್ರ್ಯಗಳ ಪೇಳಲು
ಸಾನುನಯದೊಳು ತಿಳಿಸೆ ಸೂತನು ಮನದ ಸಂಭ್ರಮದಿ
ಸ್ನಾನ ಸಂಧ್ಯಾದಿಗಳ ಮುಗಿಸುತ
ದಾನವಾಂತಕ ಸತ್ಯದೇವನು
ದೀನದಲಿತರ ಪೊರೆದ ಕಥೆಗಳ ಕೇಳಿ ನೀವೆಂದ ೧

ಒಂದು ಕಾಲಕೆ ವಿಪ್ರನೊರ್ವನು
ಹೊಂದುತಾಸಕ್ತಿಯನು ತನ್ನಯ
ಬಂಧುಬಳಗ ಸಮೇತ ಸೂನೃತವ್ರತವ ಕೈಗೊಂಡ
ಇಂಧನದ ಹೊರೆಯೊಂದನಿಳುಹುತ
ನೊಂದಳಲಿ ಬಾಯಾರುತೊರ್ವನು
ನಿಂದನಲ್ಲಿಯೆ ಮನೆಯ ಬಳಿ ವಿಶ್ರಾಂತಿಯನು ಬಯಸಿ ೨

ಕಟ್ಟಿಗೆಯ ಮಾರುವವ ಕುತುಕದಿ
ನಿಟ್ಟಿಸಿದನಾ ಧನಿಕವಿಪ್ರನು
ತೊಟ್ಟ ಪೂಜೆಯನಡಸಿರುವ ನೀರಡಿಕೆಯಂ ಮರೆದ
ದಟ್ಟಡಿಯಿಡುತ್ತೊಳಪುಗುತ ಮನ
ಮುಟ್ಟಿ ಬಹ ನಲವಿಂದ ಕೇಳ್ದನು
ನಿಟ್ಟೆಯಲದೇಂ ಗೈಯುತಿರುವಿರಿ ಫಲವದೇನುಂಟು? ೩

ಬೆಸಸ ಬೇಕೆಂದೆನಲು ವಿಪ್ರನು
ಬೆಸನಪಡದಿರು ಕಾಷ್ಠವಿಕ್ರಯಿ!
ಪಸರಿಸಿರ್ಪುದು ಸತ್ಯನಾರಾಯಣನ ನೋಂಪಿಯಿದು
ರಸೆಯಲಿದರ ಮಹತ್ವದಿಂದಘ
ವಿಸರಗಳು ತೊಲಗುವುವು ಸುಖಸಂ
ತಸಗಳೊದಗುತೆ ಪುಣ್ಯ ಚರಿತಾರ್ಥಗಳನಿತ್ತಪುದು ೪

ಲಭಿಸಿತೆನ್ನಯ ಬಯಕೆಯೈಸಿರಿ
ಯಭಿನಮಿಸಿ ಪೂಜಿಸಲು ಸತ್ಯಾ
ನುಭವದಲಿ ವರ ಸತ್ಯನಾರಾಯಣನ ಭಕ್ತಿಯಲಿ
ವಿಭವದಲಿ ಕೈಕೊಂಡೆ ನೋಂಪಿಯ
ನಭಯ ವರದನು ಸತ್ಯದೇವನು
ವಿಭವದಿಂ ರಕ್ಷಿಸಿದ ನಡೆಸೀ ವ್ರತವನೆಂದೆನಲು ೫

ಕಾಷ್ಠವಿಕ್ರಯಿ ಮಾನಿಸುತ ತ
ನ್ನಿಷ್ಟಗಳು ಫಲಿಸುವುವು ಸಕಲಾ
ರಿಷ್ಟಗಳು ತೊಲಗುವುವೆನುತ ಸಾಷ್ಟಾಂಗವೆರಗುತ್ತ
ವಿಷ್ಟರಶ್ರವ ಕರುಣೆಯನು ತಾ
ನಿಷ್ಟಿಸುತ ನೋಂಪಿಯ ವಿಧಾನದ
ನಿಷ್ಠೆಯಲಿ ಬಿನ್ನವಿಸಿ ಪಡೆದು ಸಪಾದ ಭಕ್ಷ್ಯವನು ೬

ಹೊರಟನಾ ವಿಕ್ರಯಿಯು ಪದುಳದಿ
ಸರಸಿಜಾಸನ ಪಿತನನಂತಃ
ಕರಣದಲಿ ಜಾನಿಸುತ ತನ್ನಾಯಾಸವನು ಮರೆದು
ಪರಮ ಸಂಪ್ರೀತಿಯಲಿ ಬಾಡಬ
ನೊರೆದ ನೋಂಪಿಯ ನೆನೆದು ಬಳಿಕಾ
ಮರುದಿನದೊಳೀ ವ್ರತವ ಗೈಯಲು ಮನೆಗೆ ತೆರಳಿದನು ೭

ಬಳಿಕ ವಿಕ್ರಯಿ ಮರುದಿವಸ ಮುಂ
ಬೆಳಗಿನಲ್ಲೇಳುತ್ತ ನಡೆಸುವೆ
ನಳಿನನಾಭ ವ್ರತವನೆನ್ನುತೆ ವಿಪುಲ ಸಂಭ್ರಮದಿ
ಒಳಿತು ಕಟ್ಟಿಗೆಯೊಣಗಿಹುದು ನೀಂ
ಕೊಳಿರಿ ಕೊಳ್ಳಿರೆನಲ್ಕೆ ಕೇರಿಯ
ಬಳಿಯೆ ವಿಕ್ರಯವಾದುದಾ ಕಟ್ಟಿಗೆಯ ಹೊರೆಯೆಲ್ಲ ೮

ದೊರೆತುದಾತಗೆ ವಿಪುಲ ಸಂಪದ
ಹರುಷಗೊಂಡನು ಹರಿಯ ಕರುಣೆಗೆ
ತರಿಸಿ ಸಂಭಾರಗಳ ಗೈದನು ಭಕ್ಷ್ಯಭೋಜ್ಯಗಳ
ತ್ವರೆಯಲಣಿಗೊಳಿಸುತ ಸಪಾದವ
ನುರೆ ಸಡಗರದಿ ಬಂಧುಮಿತ್ರರ
ಕರೆಸಿ ಪೂಜೆಯ ಗೈದು ಸತ್ಯನನಿಂತು ನುತಿಸಿದನು ೯

ದೀನಜನಮಂದಾರ ಮಧುಹರ
ಧೇನುಕಾಸುರ ಮಥನ ಮುರಹರ
ದಾನವಾಂತಕ ಕರಣಕಾರಣ ನೀರದಾಕಾರ
ದಾನಿ ಭಜಕರ ದೈವ ಶುಭಕರ
ಮೌನಿವಂದಿತ ಘನಕೃಪಾಕರ
ನೀನೆ ಗತಿಮತಿಯೆಂದು ವಿಕ್ರಯಿಯಂದು ನುತಿಸಿದನು ೧೦

ನೆರೆದ ಬಾಂಧವರೊಡನೆ ಸತ್ಯನ
ನಿರತಿಶಯದಾನಂದದಿಂದಾ
ದರಿಸಿ ಪೂಜಿಸಿ ವೀಳ್ಯ ಪುಷ್ಪ ಸಪಾದ ಭಕ್ಷ್ಯವನು
ನೆರೆದವರ್ಗೀಯುತ್ತ ವಿಕ್ರಯಿ
ಮರೆಯದಿರ್ದನು ಸತ್ಯದೇವನ
ಧರೆಯನುಳಿದಾ ಸತ್ಯಲೋಕಕ್ಕೈದಿದನು ಕೊನೆಗೆ ೧೧

* * *

ಕುಸುಮ ೪

ಸೂಚನೆ : ವಣಿಜ ಸಂಕಲ್ಪಿಸುತ ನೋಂಪಿಯ
ಗೋಣಗಿ ಸತ್ಯನ ಮರೆದು ತೀಕ್ಷ್ಣದಿ
ಹೆಣಗುತರ್ಚನೆಗೈದು ಸೇರ್ದನು ಹರಿಪದಾಂಬುಜವ

ಮುಂಗತೆಯನಾಲಿಸಿರಿ ಮುನಿಪೋ
ತ್ತುಂಗ ಮಹಿಮರೆ! ಪೇಳ್ವೆ ತೋಷದೊ
ಳಂಗಜಾತನ ಪಿತನ ಪೂಜಿಸಿದುಲ್ಕಮುಖ ನೃಪನು
ಭಂಗಮಿಲ್ಲದ ತೆರದಿ ದೇಶದೊ
ಳಿಂಗಿತಾರ್ಥವನಿತ್ತು ಸಜ್ಜನ
ಸಂಗಡಿದ್ದನು ಭೂರಿ ದಕ್ಷಿಣೆಗಳನು ನೀಡುತಲಿ ೧

ಆ ಪರಮಸಾತ್ವಿಕಶಿರೋಮಣಿ
ಭೂಪ ಸದ್ಗುಣಿಯುಲ್ಕಮುಖನತಿ
ಪಾಪಭೀತನು ಸತ್ಯಸಂಧನು ಧಾರ್ಮಿಕನುಮಾಗಿ
ಶ್ರೀಪತಿಯ ಸೇವೆಯನು ಮಾಡುತ
ಲಾಪದಂಗಳ ಕಳೆದು ಮನದನು
ತಾಪವಾಂತನು ನೃಪತಿ ಸುತರಿಲ್ಲೆಂಬ ಶೋಕದಲಿ ೨

ಆತನರಸಿಯು ಭದ್ರಶೀಲೆಯು
ಸಾತಿಶಯ ಸದ್ಗುಣ ಸುಶೀಲೆಯು
ಮಾತುಮಾತಿಗೆ ಹರಿಯ ನೆನೆವಳು ನಿಯಮನಿಷ್ಠೆಯಲಿ
ಈ ತೆರದೊಳಿರೆ ಭೂಪತಿಯು ಸಂ
ಗಾತಿವೆರಸುತ್ತೈದಿದನು ಗೈ
ವಾತುರದೆ ಸತ್ಯಾತ್ಮಪೂಜೆಯ ನದಿಯ ದಂಡೆಯಲಿ ೩

ಸಾರಪರಿಮಳ ವಸ್ತುನಿಕರದಿ
ಚಾರುತರ ವರಪದ್ಮಪೀಠದಿ
ಮಾರಜನಕನ ಸತ್ಯದೇವನ ಮೂರ್ತಿಯನ್ನಿರಿಸಿ
ಶೌರಿ ದಾನವವೈರಿ ಮುರರಿಪು
ನೀರಜೋದ್ಭವವಿನುತ ಶ್ರೀವರ
ಕಾರಣಿಕ ಪರಮೇಶ ಪೊರೆ ಪೊರೆಯೆಂದು ನುತಿಸಿದನು ೪

ದೇಶ ದೇಶವ ತಿರುಗಿ ನಾವೆಯ
ಲೇಸಿನಿಂದಲಿ ನಿಲಿಸಿ ಜಲಧಿಯೊ
ಳಾಸೆಗೊಂಡತಿಮುದದೊಳೈದಿದ ತೀರದೆಡೆಗಂದು
ಆ ಸಮಯಕನುವಾಗಿ ವರ್ತಕ
ನಾಸಕುತಿಯಿಂದೈದಿ ನಿಂದಿರೆ
ವಾಸುದೇವನ ಪೂಜೆಗೈವಾ ಭೂಪನಿದ್ದೆಡೆಗೆ ೫

ಕಂಡನಾ ಜನಪತಿಯು ಮಾಳ್ಪಾ
ಪುಂಡರೀಕವರದನ ಪೂಜೆಯ
ದಿಂಡುಗೆಡೆದನು ಕೈಯ ಮುಗಿಯುತ ಭಾವಶುದ್ಧಿಯಲಿ
ಮಂಡಿಸಿಹ ದೇವತೆಯದಾರ್ ಭೂ
ಮಂಡಲಾಧಿಪ ಸಡ್ಡೆಯಲಿ ಕೈ
ಕೊಂಡ ನೋಂಪಿಯಿನಪ್ಪ ಫಲವೇನೆಂದನಾ ವಣಿಜ ೬

ಒಳ್ಳಿತಿದೊ ಕೇಳ್ ವಣಿಜವರ ಮನ
ಮುಳ್ಳೊಡೆಸಗೈ ನೀನಿದನು ನಿನ
ಗುಳ್ಳ ಬಯಕೆಯು ಸಿದ್ಧಿಸುವುದೀ ವ್ರತದ ಮಹಿಮೆಯಲಿ
ದಳ್ಳುರಿವ ಶೋಕವಿರಲದು ಕೊನೆ
ಗೊಳ್ಳುವುದು ಬೇಗದಲಿ ಮತ್ತಿದ
ಕುಳ್ಳಮಹಿಮೆಯಪಾರವೈ ಎಸಗೆಂದನಾ ಭೂಪ ೭

ಭೂಮಿಪಾಲನೆ ಪೇಳು ವಿವರಿಸಿ
ಕಾಮಿತವು ನೆರೆದಪುದೆ ಪೂಜಿಸ
ಲೀ ಮಹಾಮಹಿಮನೊಲಿದೀವನೆ? ಬಯಸಿದಿಷ್ಟವನು
ನೇಮದಲಿ ಕೈಗೊಳ್ವೆನೆನ್ನಯ
ಭಾಮೆಯೊಂದಿಗೆಯರ್ಭಕೇಚ್ಛೆಯೊ
ಳಾ ಮುರಾಂತಕ ಸತ್ಯದೇವವ್ರತವ ತಳುವದೆಯೆ ೮

ವಣಿಜವರನೇ ಕೇಳು ಗಮನಿಸಿ
ಫಣಿಪತಲ್ಪನ ಸತ್ಯನಾರಾ
ಯಣನ ನೋಂಪಿಯಿದೆಂದು ನುಡಿಯಲು ವರವಿಧಾನವನು
ಮಣಿದು ಭಯಭಕ್ತಿಯಲಿ ದೇವಚ
ರಣವ ನುತಿಸುತಲೆರಗಿ ಮೋದದಿ
ತಣಿದು ಭೂಪನ ಕರದಿ ನೈವೇದ್ಯವನು ತಾ ಪಡೆದ ೯

ಭೂಪನೊರೆದಾ ವ್ರತ ವಿಧಾನವ
ನಾಪಣಿಕ ಯೋಚಿಸುತ ಮನದಲಿ
ಗೋಪವಾಹನ* ಪರಮ ಪೂಜೆಯ ಗೈಯಬೇಕೆಂದು
ರೂಪಿಸುತ ಸಂಮುದದೆ ತನ್ನೊಳ
ಗೀ ಪರಿಯಲಾ ಸತ್ಯದೇವನ
ಸಾಫಲತ್ವವ ಪಡೆಯೆ ಸತಿಯೊಳು ಪೇಳಲೈದಿದನು ೧೦

ಆಕೆ ಲೀಲಾವತಿಯು ಕೇಳುತ
ಲೇಕಮಾನಸಳಾಗಿ ನಮಿಸುತ
ಪಾಕಶಾಸನ ವಂದ್ಯ ಸತ್ಯನ ಭಾವಶುದ್ಧಿಯಲಿ
ನೂಕಿದಳು ಪರಮೋತ್ಕಟದ ಚಿಂ
ತಾಕುಲತೆಯನು ಪುತ್ರಹೀನತೆ
ಯಾ ಕಮಲಮುಖಿ ಪಡೆದು ಸತ್ಯಸಪಾದ ಭಕ್ಷ್ಯವನು ೧೧

ಸತ್ಯದೇವನ ಪೂಜಿಸಲು ತನ
ಗತ್ಯಧಿಕ ಪರಿತೋಷಮಹುದದ
ಕತ್ಯವಸರವದೇಕೆ? ವಿರಚಿಸಲೀಗಲೀ ವ್ರತವ
ಸತ್ಯದಲಿ ಮುಂದೆಮಗೆ ನೀಡಲ
ಪತ್ಯನನು ಕರುಣಿಸಲಿ ಮಾಳ್ಪೆನು
ಸತ್ಯದೇವನ ಕರುಣೆಯೊದಗಲಿಯೆಂದನಾ ವಣಿಜ ೧೨

* ಗೋ = ಪಕ್ಷಿ, ಗೋಪ = ಗರುಡ

ಇರಲಿರಲು ಸತ್ಕಾಲಮೊದಗಲು
ಪರಮಸದ್ಗುಣಿ ಸಾಧ್ವಿ ವರ್ತಕ
ವರನ ಹೆಂಡತಿ ಗರ್ಭತಳೆದಳಪೂರ್ವಶೋಭೆಯಲಿ
ನೆರೆದುಗುವ ಕಾಂತಿಯಲಿ ಮೆರೆಮೆರೆ
ದರುಮೆವೆಂಡಿರ ನೋಡಿ ವಣಿಜನು
ಹಿರಿಹಿರಿದು ಹಿಗ್ಗಿದನು ಸತ್ಯೇಶನನು ನೆನೆನೆನೆದು ೧೩

ಸತ್ಯದೇವ ಕೃಪಾಕಟಾಕ್ಷವು
ಮಿಥ್ಯವಹುದೇ ಧರೆಯೊಳೆನ್ನುತ
ನಿತ್ಯವೂ ನೆರೆ ನಂಬಿ ನುಡಿಯುತಲಿದ್ದನಾ ವಣಿಜ
ಸತ್ಯದೇವನ ಕೃತ್ಯವೆಸಗುತ*
ಪತ್ಯದೊರೆಕೊಳಲೆಂದು ತಾನೌ
ಚಿತ್ಯವನು ಮರೆದುಲಿದನಾ ಲೀಲಾವತಿಗೆ ಮುದದೆ ೧೪

ಇಂತು ಕಾಲವು ಕಳೆಯುತಿರಲದ
ರಂತರದೆ ನಿಜಪತ್ನಿ ಪಡೆದಳು
ಕಂತುಪಿತನರ್ಧಾಂಗಿಯಂದದಿ ಚೆಲ್ವ ಪೆಣ್ಮಗುವ
ಮುಂತೆ ಶಿಶುವಿಗೆ ಜಾತಕರ್ಮವ
ನಂತೆ ವರಸುಕ್ಷೇಮ ಶಾಂತಿಯ
ನಿಂತು ನೆರವೇರಿಸಿ ಕಲಾವತಿಯೆಂದು ಪೆಸರಿಟ್ಟ ೧೫

ಮೆರೆವ ಪಸುಳೆಯ ನೋಡಿ ನಲಿಯು
ತ್ತಿರೆ ಬಳೆಯುತಿರ್ದಾ ಕಲಾವತಿ
ಗರುಮೆ ಹೆಚ್ಚಿತು ಒಳೆವ ಬಿದಿಗೆಯ ಚಂದ್ರನಂದದಲಿ
ಅರರೆ ಮತ್ತಲ್ಲಲ್ಲಿ ಪರಿಯುತ
ನೆರೆಹೊರೆಯ ಮನೆಮನೆಗಳಲಿ ಸಂ
ಚರಿಸಿ ಹರ್ಷದಿ ಬಳೆದಳರಮಗಳಂತೆ ಕುಶಲದಲಿ ೧೬

ನೆರೆಮನೆಯ ವನಿತೆಯರು ನಲವಂ
ಕುರಿಸೆ ವಣಿಜನ ಸದನಕೈತಂ
ದುರು ವಿಲಾಸದೆ ಕೂಸನೆತ್ತುತೆ ನಗಿಸಿ ನಲಿಯುವರು
ನೆರೆ ವಿಲೋಕಿಸಿ ಬಡನಡುವಿನ
ಲ್ಲಿರಿಸಿ ಮನದಣಿಯುವರು ಮುದ್ದಿಸು
ತಿರಲು ಲೀಲಾವತಿಯ ಪುಣ್ಯಕೆ ಸಾಟಿಯಿನ್ನುಂಟೆ? ೧೭

ಅವಳ ಸೊಂಟವನೇರಿ ನಲಿಯುತ
ಲಿವಳ ಭುಜಗಳ ಸೇರಿ ಕುಣಿಯುತ
ಲವಳಿವಳ ತೋಳಿನಲಿ ನಲಿವಳು ಬಳಿಕಲಿಳಿಯುವಳು
ತವಕದಲಿ ನಗೆದೋರಿ ನಿಲುವಳು
ಸವಿಯ ಚುಂಬನದಿಂದೆ ನಾರಿಯ
ತವರವರು ಹಿರಿಹಿಗ್ಗಿ ಲಲ್ಲೈಸುವರು ಸಮ್ಮುದದೆ ೧೮

ಪಸುಳೆಗಾ ಲೀಲಾವತಿಯು ಸಲೆ
ಮಿಸುಪ ಕಾಂತಿಯ ಕನಕಪಾತ್ರೆಯೊ
ಳೊಸೆದು ನೊರೆವಾಲುಗಳ ಕುಡುವಳು ಬಿಡದೆ ದಿನದಿನದಿ
ರಸೆಯೊಳತಿ ವಿಖ್ಯಾತಮೆನಿಸಿದ
ವಸನಗಳನುಡಿಸುತ್ತೆ ನಲಿವಳು
ಮಿಸುನಿ ರನ್ನದ ಪದಕ ಬಾಪುರಿ ಹಾರಗಳನಿಡುತ ೧೯

ಇಂತು ವತ್ಸರವೈದು ಕಳೆಯಿತು
ಸಂತಸದೊಳೋಲಾಡಿ ಕಾಂತೆಯು
ಪಿಂತೆ ಸತ್ಯಾರ್ಚನೆಯ ಮಾಳ್ಪುದ ನೆನೆದು ತವಕದಲಿ
ಕಾಂತಗಭಿವಂದಿಸುತ ಪೇಳಿದ
ಳಂತರಾತ್ಮನ ದಿವ್ಯನೋಂಪಿಯ
ಮುಂತಳೆವುದತಿಶುಭವು ಭದ್ರಂಕರವು ತಾನೆಂದು ೨೦

ವನಿತೆ ಪೇಳ್ದಾ ನುಡಿಯನಾಲಿಸಿ
ಮನಕೆ ಕಳವಳ ಮೂಡೆ ಚಿಂತಿಸು
ತನುನಯದೆ ನುಡಿದನು ಮರೆಸಿ ನಿಜಮತವನಾ ವಣಿಜ
ಚಿನುಮಯಾತ್ಮಕ ಸತ್ಯದೇವನ
ಘನತೆಯದು ಬಲು ಹಿರಿದು ಭಜಿಸಲು
ಧನವನಾರ್ಜಿಸೆ ದೂರ ದೇಶಕೆ ಪೋಪೆನಾನೆಂದ ೨೧

ಈಗಳೇನಾತುರವಿದಕೆನುತ
ಬೀಗಿ ನುಡಿದನು ದ್ರವ್ಯಲೋಲುಪ
ಸಾಗಿ ಬರುವೆನು ವಿಕ್ರಯಿಸುತೀ ರತ್ನಮಾಣಿಕವ
ಬೇಗ ಲಾಭವ ಗಳಿಸಿ ವಿಪುಲದೊ
ಳಾಗ ನಡೆಸುವೆ ಸತ್ಯಪೂಜೆಯ
ನೀಗ ಸಲ್ಲದೆನುತ್ತ ಸುದತಿಯ ವಣಿಜ ಬೀಳ್ಕೊಂಡ ೨೨

ಹೊರಟನಾತನು ಸತಿಗೆ ನುಡಿಯುತ
ಮರಳಿ ತಿರುಗಿದನವಳ ಸನಿಹಕೆ
ತೆರಳು ಬೇಗನೆ ಬೇರೆ ಹೊಳಲಿಗೆ ಸೇರಿ ನೆಲೆಗೊಳುವ
ಸರಕು ಮಿಗಿಲಾಗಿಹುದು ತನ್ನೊಳು
ಮಿರಮಿರನೆ ಮಿರುಗುವತಿಶಯದೀ
ಹರಳುಗಳ ವಿಕ್ರಯಿಸಿ ವರ್ಧಿಸಲಧಿಕ ಸಂಪದವು ೨೩

ಭಾಮೆ ಕೇಳೀಗೆನ್ನ ಮಾತನು
ನಾಮಕರಣವು ಹಸುಳೆ ಕರ್ಮವು
ನೇಮನೀತಿಯ ಮಾರ್ಗಮಪ್ಪುದು ಮುಂದೆ ನಾಮೆಸಗೆ
ಗೋಮಿನೀಪತಿಯೊಲುಮೆ ಪಡೆಯ
ಲ್ಕಾಮಹಾಶುಭದಿನವು ಬರ್ಪುದು
ಕೋಮಲೆಯ ವೈವಾಹಕಾಲಕೆ ಸಿದ್ಧಿಸುವುದೆಂದ ೨೪

ಪಿರಿಯ ಹೊಳಲಿಗೆ ಪಯಣ ಬೆಳೆಸಲು
ಸರಕುಗಳ ಜೋಪಾನಗೊಳಿಸುತ
ಲರುಮೆವೆಂಡತಿಮಗಳೊಡನೆ ಪರಿವಾರವನು ಕೂಡಿ
ಹೊರಟನಾ ಸಿರಿವಂತವರ್ತಕ
ತೊರೆದನಿದ್ದೂರನು ಸುಮೌಲ್ಯದ
ಹರಳುಗಳ ವಿಕ್ರಯಿಸಿ ಮಿಗಿಲೈಶ್ವರ್ಯವಾರ್ಜಿಸಲು ೨೫

ಮನುಜರೀ ಪರಿ ನುಡಿದ ಕಾರ್ಯಗ
ಳನು ನಡಸೆ ಬೇಸತ್ತು ಮರೆವರು
ತನುವನೀಡಾಗಿಪರು ಭಾಗ್ಯವಗಳಿಸುವಾತುರದೆ
ಮನುಜಲೋಕದ ಪರಮಪಾವನ
ದನಿತು ಭಾಗ್ಯವು ನಶಿಸಿ ಪೋಪುದು
ನೆನೆದು ಕಾರ್ಯವ ಗೈಯದಿರ್ದೊಡೆಯೆಂದನಾ ಸೂತ ೨೬

ಲೋಕಜೀವಾತ್ಮಕನು ಶ್ರೀವರ
ನೇಕಚೇತನನು ವಿನುತಪುರಾ
ಣೈಕವೇದ್ಯನು ಸಕಲರೋಲೈಸುತಿರಲಾ ಹರಿಯ
ಏಕಚಿತ್ತದಿ ಭಜಿಪ ಶರಣರ
ನೇಕಬಗೆಯಲಿ ರಕ್ಷಿಸುವನಾ
ಲೋಕನಾಥನನೇಕೆ ಮನಜರು ಮರೆವರೋ ಕಾಣೆ ೨೭

ಕಳೆಯೆ ಕಾಲವು ಚಟುಲಗತಿಯಲಿ
ಬಳೆದು ನಿಂತಳು ಸುತೆಯು ಮದುವೆಗೆ
ಹೊಳೆವ ದೇಹದ ಸೌಮ್ಯ ಷೋಡಶಿಯಂಗಕಾಂತಿಯಲಿ
ಬಲಿದ ದುಗುಡದ ಕಾಂತೆ ಕಾಂತನ
ಬಳಿಗೆ ಸಾರುತ ಸುತೆಯ ಲಗ್ನದ
ಗಳಿಗೆ ಸಂಪ್ರಾಪ್ತಿಸಿತು ಸತ್ಯಾರ್ಚನೆಯ ಗೈಯೆನಲು ೨೮

ಕರೆಸುತಾಪ್ತರ ತಿಳುಹಿ ವಿಷಯವ
ನರಸಿ ತರುವುದು ಯೋಗ್ಯವರನನು
ತರಹರಿಸದಿರಿಯೆಂದು ಜಾತೆಯ ಮೊಗವ ನೋಡಿದನು
ಪುರವ ಹೊರವಂಟಲೆಯುತಲೆಯುತ
ಲಿರದೆ ಬಂದರು ಭರದೆ ಕಾಂಚನ
ಪುರಕೆ ಸುಂದರವಣಿಜಸುತನನು ಕಂಡು ಹಿಗ್ಗಿದರು ೨೯

ಮನೆಗೆ ನಡೆದರು ವರನ ಹಿರಿಯರ
ಮನವನೊಲಿಸುತ ವಣಿಜಪುತ್ರಿಯ
ವಿನಯಗುಣಕುಲಶೀಲಸಂಪದಗಳನು ಬಣ್ಣಿಸುತ
ಅನುನಯದಿ ಮಂಗಳಸುವಸ್ತುಗ
ಳನುಗೊಳಿಸಿ ಬಾಂಧವ ಸುದತಿಯರ
ತನಯರೊಡನೈದಿದರು ಪರಮೋತ್ಸಾಹದಲಿ ಪುರಕೆ ೩೦

ಕರೆದು ತಂದರು ವಣಿಜಪುತ್ರನ
ಸರಿಕತನದಾ ಸಿರಿಯ ವರನನು
ಹಿರಿಯರನುಮತಿಯಿಂದ ಕಾಂಚನಪುರದ ಕಡೆಯಿಂದ
ವರನು ಸರಿಸಮ ನಿಮ್ಮ ಸುಂದರ
ತರಳೆಗೆನುತಭಿವರ್ಣಿಸಿದರಾ
ವರನ ಸನ್ನುತಶೀಲಗುಣ ಸಂಪದವನಾತನಿಗೆ ೩೧

ವರನ ಕಂಡನು ರತ್ನವಿಕ್ರಯಿ
ಕರೆಸಿ ತೋರಿದನಂದು ವನಿತೆಯ
ಬರಿಸಿ ಜಾತೆಯ ತೋರಿ ವರನಿಗೆ ಹರುಷವನು ತಾಳ್ದು
ತರುಣಿ ಸದ್ಗುಣಮಣಿ ಕಲಾವತಿ
ನೆರೆ ವಿಲೋಕಿಸಿ ಮನದೆ ನಲಿದಳು
ಕರೆಸಿ ಜೋಯಿಸರಿಂದೆ ಬರೆಸಿದ ಲಗ್ನಪತ್ರಿಕೆಯ ೩೨

ತನ್ನ ಸಿರಿವಂತಿಕೆಗೆ ಸರಿಮಿಗಿ
ಲೆನ್ನುವಾ ಪರಿ ಮದುವೆಮಂಟಪ
ವನ್ನು ನಿರ್ಮಿಸಿ ಹೊಳೆಹೊಳೆವ ಮಣಿಗಣದ ಕಾಂತಿಯಲಿ
ಚೆನ್ನು ಕುಸುಮೋತ್ಕರದ ವೈಭವ
ವನ್ನು ಕದಳೀಸ್ತಂಭತೋರಣ
ವನ್ನು ನೆರವಿಸುತಂದಮಿಗೆ ಮಂಟಪವ ರಚಿಸಿದರು ೩೩

ಜ್ಞಾತಿಬಾಂಧವರಿಷ್ಟಮಿತ್ರರ
ನಾತುರದಲಾಹ್ವಾನ ಗೈದನು
ದಾತ ತಾನೆಂದೆನಿಸಿ ಸತ್ಕರಿಸಿದನು ನೆರವಿಯನು
ಜಾತೆಯಾದ ಕಲಾವತಿಯನಾ
ಖ್ಯಾತವರ್ತಕಪುತ್ರಗತಿಸಂ
ಪ್ರೀತಿಯಿಂದಲಿ ಧಾರೆಯೆರೆದನು ಮಂಗಳೋತ್ಸವದಿ ೩೪

ಮೊಳಗಿದವು ಶುಭವಾದ್ಯಗಳು ಕಿವಿ
ಗಳಿಗೆ ಯಿನಿದೆನಲುತ್ಸಹದೆ ನಲಿ
ನಲಿದು ನಲಿಸಿದನತಿಥಿಯಭ್ಯಾಗತರ ವರ್ತಕನು
ತಳಿಸಿ ಪನ್ನೀರನ್ನು ಪುಷ್ಪಾ
ವಳಿಯ ಫಲತಾಂಬೂಲ ದಕ್ಷಿಣೆ
ಗಳನು ಕೊಡಿಸಿದನಖಿಳ ಶಿಷ್ಟರ ಬಂಧು ಸಂಕುಲಕೆ ೩೫

ಕೇಳಿ ಶೌನಕಮುನಿವರೇಣ್ಯರೆ!
ಬೀಳುಕೊಟ್ಟನು ಸಕಲಬಾಂಧವ
ಜಾಲವನಧಿಕಮನ್ನಣೆಯಲಾಢ್ಯತೆಗೆ ಮಿಗಿಲೆನಿಸಿ
ಮೇಳವಿಸಿತಾ ಸಿರಿಯ ಮದದಿಂ
ತಾಳಲಿಲ್ಲವು ಮನದಿ ಲಕ್ಷ್ಮೀ
ಲೋಲಸತ್ಯಾತ್ಮಕನ ನೋಂಪಿಯ ನೆನಹು ವಣಿಜನಿಗೆ ೩೬

ಮಗಳ ಮದುವೆಯ ನಡೆಸಿ ವಿಭವದೊ
ಳೊಗುಮಿಗೆಯಲಾನಂದವಡೆದನು
ನಗರವಾಸಿಗಳೆಲ್ಲ ನಲಿದರು ವರ್ತಕನ ಪೊಗಳಿ
ಸೊಗಸುತೀವಿದ ವೆಗ್ಗಳತೆಯಲಿ
ಮುಗಿಸಿದನು ವೈವಾಹಸಂಭ್ರಮ
ಹೊಗಳಿಕೆಗೆ ಬಾಯ್ಬಿಟ್ಟು ಬಿಂಕದಿ ಮರೆತು ನೋಂಪಿಯನು ೩೭

ಕಂಡನಾ ಮುರವೈರಿ ವಣಿಜನ
ಭಂಡತನವನು ನೆನೆದು ನೋಂಪಿಯ
ಕೊಂಡು ಮಾಡದೆ ಸಿರಿಮದದೆ ಮುಂದೂಡಿ ಲಾಘವದಿ
ಹೆಂಡಿರನು ಮಕ್ಕಳನು ಧನವನು
ಕಂಡು ನಿತ್ಯವಿದೆಂದು ಭಾವಿಪ
ಲಂಡತನಕಾಂ ಶಿಕ್ಷಿಸುತ ತಿಳುಹುವೆನು ಸತ್ಪಥವ ೩೮

ದೈವಗತಿಯನು ಬಲ್ಲರಾರೀ
ಭೂವಳಯದಲಿ ಜಗದೊಡೆಯನಾ
ಶ್ರೀವರನು ಕಡುಮುಳಿಯಲೆಂತುಟು ಬಾಳ್ವೆ ಸೊಗಸಹುದು
ದೇವನೊಲಿದರೆ ಕಾಮಿತಾರ್ಥವ
ದಾವುದಾದೊಡಮಹುದು ಮುಳಿದರೆ
ಕಾವರಿನ್ನಾರಿಹರು ಪೇಳಿರಿಯೆಂದನಾ ಸೂತ ೩೯

ಕುಶಲಿವಣಿಜನು ತರಿಸಿ ಮಿರಮಿರ
ನೆಸೆವ ರತ್ನಾವಳಿಯ ಪಟ್ಟೆಯ
ನಸವಸದಿ ಹೊರವಂಟ ರತ್ನಾಕರದ ತೀರದಲಿ
ಮಿಸುಪ ನಾವೆಯೊಳಧಿಕಹರುಷದೊ
ಳೆಸೆವ ರತ್ನಾಸಾರಪುರದಲಿ
ಪೊಸತೆನಲು ನೆರವೇರಿಸಲ್ಕಾ ರತ್ನವಿಕ್ರಯವ ೪೦

ಸಿರಿಗೆ ತಾನೇ ಪಿತನು ಮುರಹರ
ನರಸಿಯಾದಳು ತನುಜೆಯೆನ್ನವೆ
ಸುರತರುವು ಸುರಧೇನು ಚಿಂತಾಮಣಿಗಳಿನ್ನೇನು
ಸುರಪ ಯಾಚಿಸೆ ಸೇರಿದವು ಸುರ
ತುರಗವೈರಾವತವು ಧನ್ವಂ
ತರಿಯು ಹಿಮಕರನಮೃತವೆನ್ನೊಳು ಜನಿಸಿಬಂದಿದುವು ೪೧

ಇನ್ನೆನಗೆ ಗತಿಯಾರು ತೊಲಗಿದೊ
ಡೆನ್ನ ಯಗ್ಗದ ವಸ್ತುರಾಶಿಗ
ಳನ್ನು ಪಡೆಯಲು ಮತ್ತೆ ತನಗದು ಸಾಧ್ಯವೇಯೆಂದು
ಖಿನ್ನ ಮಾನಸನಾಗಿ ಮಕರಿಗ
ಳನ್ನು ಪೋಷಿಪ ಕಾರ್ಯಮಾದುದು
ತನ್ನದೆನ್ನುತೆ ಶರಧಿ ಘೋರ್ಗರೆಯುತ್ತ ರೋದಿಸಿತು ೪೨

ಈ ತೆರದೊಳಿರೆ ವೈಶ್ಯವರ ಜಾ
ಮಾತನೊಡಗೂಡಿಯೆ ತೆರಳ್ದಾ
ಖ್ಯಾತಿವೆತ್ತಿಹ ಚಂದ್ರಕೇತುವಿನಾಳಿಕೆಯ ಪುರಕೆ
ನೀತಿಕುಶಲನು ಪರಮಧಾರ್ಮಿಕ
ನಾತನಿರಲಿತ್ತಲು ಹರಿಯು ಕೋ
ಪಾತಿರೇಕದಿ ಶಾಪವಿತ್ತನು ರತ್ನವಿಕ್ರಯಿಗೆ ೪೩

ಈತನಿದೊ ಸಂಕಲ್ಪಹೀನನು
ನೀತಿಬಾಹಿರ ವಿತ್ತದಾಸೆಗೆ
ಸೋತುಕೊಂಡಿರುತಿಹನು ನೋಂಪಿಯ ಮರೆತು ಗರ್ವದಲಿ
ಈತಗೊದಗಲಿ ಕಷ್ಟನಷ್ಟಗ
ಳಾತರುದಿ ಸುಖಶಾಂತಿತೊಲಗಪ
ಘಾತವನ್ನನುಭವಿಸಿ ಕೊರಗಲಿಯೆಂದನಾ ಹರಿಯು ೪೪

ವಣಿಜರಿರ್ವರು ಸೇರಿ ತೀರವ
ದಣಿವನಾರಿಸಿಕೊಂಡು ಬೆಚ್ಚರ
ದಣಿಯಗೈಯುತಲಿಟ್ಟರಾಪಣವೊಂದನಾ ಪುರದಿ
ಫಣಿಯ ಮಸ್ತಕಮಣಿಗಳಂದದ
ಮಣಿಯ ತಂದರು ನಾವೆಯಿಂದಲಿ
ಅಣಕಗೈದವೊ ತಾವೆನಲು ನಕ್ಷತ್ರಮಂಡಲವ ೪೫

ನೋಡಿ ತಣಿದರು ಕೇಳಿ ಮಣಿದರು
ನೋಡುನೋಡುತ ಮೈಯ ಮರೆತರು
ಬೀಡುಬೀಡಿನ ಜನರು ನಿಬ್ಬೆರಗಾಗಿ ನೋಡುತ್ತ
ಕೂಡಿಕೂಡುತಲೈದಿದರು ಕೆಲ
ರೋಡಿದರು ಮನೆಗಳಿಗೆ ಪತಿಯರ
ಪೀಡಿಸುತ ರತ್ನಗಳ ಪಡೆಯಲು ಬಲ್ಮೆನಲ್ಮೆಯಲಿ ೪೬

ಮುತ್ತುಮಾಣಿಕ ರತ್ನರಾಜಿಯ
ನಿತ್ತ ತಂದಿಹರಿವರು ವಣಿಜರೆ
ನುತ್ತಲಾಪುರವನಿತೆಯರು ಸಂದಣಿಯಲೈತರುತ
ಸುತ್ತುವರಿದರು ಕೊಳ್ಳಲಾಶಿಸಿ
ಮುತ್ತುರತ್ನಾದಿಗಳ ಬೆಲೆ ಕೇ
ಳುತ್ತ ಕೆಲರಿದನಗ್ಗ ಪ್ರಿಯವೆಂದೆನುತಲಾಪಣದಿ ೪೭

ಕಾಲವಿಂತುಟು ಕಳೆಯೆ ವರಮಣಿ
ಜಾಲವಸ್ತುಗಳೆಲ್ಲ ನಶಿಸುವ
ಕಾಲವೊದಗಿರೆ ಲಾಭಗಳಿಕೆಯ ಪಣವನೆಣಿಸುತಿಹ
ವೇಳೆ ತಸ್ಕರನೊರ್ವನಾ ರಾ
ಜಾಲಯವನೊಳವುಗುತ ಕದ್ದನು
ಜಾಲದಲಿ ಕಾಲ್ತೆಗೆದನೊಯ್ಯುತಪಾರದ್ಯೆಸಿರಿಯ ೪೮

ಕಂಡರಿದನಾ ರಾಜದೂತರು
ತುಂಡರಿಸಿ ಹಿಡಿಹಿಡಿರೆನುತ ಬೆಂ
ಗೊಂಡುವೋಡಿದರಾಗ ಚೋರನ ಹಿಡಿವ ತವಕದಲಿ
ಕಂಡು ಚೋರನು ಸುಳಿವ ತಲ್ಲಣ
ಗೊಂಡು ಭರದಲಿ ಗಂಟನೆಸೆದನು
ಚೆಂಡಿನಂದದಿ ವಣಿಜರೆಣಿಸುವ ಹಣದ ರಾಶಿಯಲಿ ೪೯

ಬೆದರಿ ಹೌಹಾರಿದರು ವಣಿಜರು
ಚೆದರಿ ಪರಿದವು ರತ್ನರಾಶಿಗ
ಳಿದೆಕೊ ಸಿಲ್ಕಿದ ರನ್ನಗಳ್ಳನೆನುತ್ತಲಾ ಭಟರು
ಇದುವೆ ಭೂಪನ ಮನೆಯ ರನ್ನಗ
ಳಿದುವೆ ಹೊನ್ನಿನ ಮಾಲೆ ಕಂಕಣ
ವಿದಿಗೊ ಕಳ್ಳರೆನುತ್ತ ಪಿಡಿದರು ವಣಿಜರಿರ್ವರನು ೫೦

ಸೆಳೆದು ತಂದರು ನೃಪನ ಸನ್ನಿಧಿ
ಗಳಿಯಮಾವಂದಿರನು ಬಂಧಿಸಿ
ಬಳಲಿಸಿಯೆ ಕದ್ದ ನಗನಾಣ್ಯಗಳೊಡನೆ ಸತ್ವರದಿ
ಸುಳಿದು ತಂದೆವು ಚೋರರಿರ್ವರ
ನಳವಿಯಿಂದಲಿ ಪಿಡಿದು ತಮ್ಮಯ
ಬಳಿಗೆ ದಂಡಿಸಲಹುದು ಖಳರನು ತಕ್ಕ ರೀತಿಯಲಿ ೫೧

ಎನುತ ಬಿನ್ನಪಗೈದು ದೂತರು
ವಿನಯದಿಂದಲಿ ಸಾರ್ದು ನಿಂತರು
ಧನಿಕರಿರ್ವರು ಕಳವಳಿಸಿ ನಯನಾಂಬುಗಳ ಸುರಿಸಿ
ವಿನಯಭಾವದಿ ನಿಜವ ತಿಳಿಸ
ಲ್ಕನುವನಾಂತಿರೆ ಭೂಪ ನುಡಿಸದೆ
ಕನಲಿ ವಿಧಿಸಿದ ಸೆರೆಯ ವಾಸದ ಘೋರಶಿಕ್ಷೆಯನು ೫೨

ರಾಜನಬ್ಬರದಾರವಕೆ ನಿ
ಸ್ತೇಜರಾದರು ವಣಿಜರಾರ್ತತೆ
ಸಾಜಮೇನೆಂಬುದನು ತಿಳಿಯದೆ ಸಭಿಕರಿರುತಿರಲು
ರಾಜಗೃಹವನು ವಣಿಜರೈಸಿರಿ
ಸೋಜಿಗವಿದೆಂಬಂತೆ ಸೇರ್ದುದು
ಮೂಜಗದಿ ಪೊಸತಾಯ್ತು ನಿಜಗತಿ ಸತ್ಯಶಾಪದಲಿ ೫೩

ಏನನೆಂಬೆನು ಋಷಿವರೇಣ್ಯರೆ!
ಹಾನಿಯೊದಗಿತು ವಣಿಜವೃಂದಕೆ
ದಾನವಾಂತಕಸತ್ಯನೋಂಪಿಯ ಮರೆತ ಫಲವೆನಲು
ಶೌನಕಾದ್ಯರು ವಣಿಜರಿರ್ವರ
ಹೀನಫಲಿತಕೆ ಮರುಗುತವದಿರ
ಮಾನಿನಿಯರವಗತಿಯದೇನೆನೆ ಸೂತನಿಂತೆಂದ ೫೪

ಪೇಳಲೆಂತುಟು ಶೌನಕಾದ್ಯರೆ!
ಬೀಳುವೋದುದು ಸಕಲಸಂಪದ
ಧಾಳಿಯಿಟ್ಟರು ಮನೆಗೆ ಕಳ್ಳರು ವಿಧಿವಿಲಾಸದಲಿ
ಕೂಳಿಗಿಲ್ಲದೆ ರೋಗರುಜಿನವ
ತಾಳಿದಳು ಲೀಲಾವತಿಯು ಸುತೆ
ಜೋಳಿಗೆಯ ಪಿಡಿದನುದಿನವು ಸಲೆ ಭಿಕ್ಷಕಂಡಲೆಯೆ ೫೫

ಅಂತಲೆದಳು ಕಲಾವತಿಯು ಸಲೆ
ಕಂತುಪಿತನುರವಣೆಯ ಶಾಪದಿ
ಚಿಂತೆಯಾನುತೆ ಬೀದಿಬೀದಿಯ ಕೂಳ ಬಯಸುತ್ತ
ಇಂತು ಭಿಕ್ಷವನೆಳಸಿ ಬರುತಿರೆ
ಮುಂತೆ ಹಾರುವನೊರ್ವನಿರ್ಪೆಡೆ
ನಿಂತು ಬೇಡಿದಳಾಕೆ ಕವಳವ ಹಸಿವಿನುಬ್ಬಟೆಗೆ ೫೬

ಅಂದು ಮನೆಯಲಿ ಪಾರ್ವನಾತನು
ಬಂಧುಮಿತ್ರರ್ವೆರಸಿ ಪರಮಾ
ನಂದಚಿತ್ತದಿ ಸತ್ಯದೇವನ ಪೂಜೆಗೈಯುತಿರೆ
ಕಂದಿದಾನನ ತಪ್ತಹೃದಯಳು
ಬಂದು ನಿಂತಳು ಪುಷ್ಕರಾಕ್ಷನ
ಸಂದ ನೋಂಪಿಯ ತೊರೆಯಲಳವಲ್ಲೆಂದು ಭಾವಿಸುತ ೫೭

ಉಳಿದಳಲ್ಲಿಯೆ ವಿಪ್ರಸದನದ
ಬಳಿಯೆ ಕಾಣುತ ಸಂದಣಿಯನಾ
ನಳನಳಿಪ ಮಂಟಪ ತಳಿರುತೋರಣ ವಿಶೇಷಗಳ
ಮೊಳಗುವಾ ಶುಭವಾದ್ಯವೈಖರಿ
ಗಳನು ಕೇಳುತಲಾ ಕಲಾವತಿ
ಕುಳಿತು ಸತ್ಕಥೆ ಕೇಳ್ದು ಪಡೆದು ಸಪಾದಭಕ್ಷ್ಯವನು ೫೮

ಮನೆಗೆ ಬಂದಳು ಮರುದಿನದಲಾ
ಘನಕೃಪಾಕರ ಸತ್ಯನಾಥನ
ವಿನಯಪೂರ್ವಕ ನಮಿಸಿ ಭಕ್ತಿಯ ಪಾರವಶ್ಯದಲಿ
ನೆನೆನೆನೆದು ಪಂಬಲಿಸಿ ಪೂರ್ವದ
ದಿನಗಳೈಸಿರಿ ವೈಭವಂಗಳ
ದಿನಗಳುರುಳಿರಲಿನಿಯಜನಕರ ವಾರ್ತೆಯರಿಯದಯೆ ೫೯

ಎಲ್ಲಿ ಪೋದಳೊ ಜಾತೆ ನಿಶಿಯಲ
ದೆಲ್ಲಿ ಕೂಳೆಳಸೆಲ್ಲಿ ತಿರುಗುವ
ಳೆಲ್ಲಿ ಕಟ್ಟಾಸರಿನೊಳೆಲ್ಲಿಯೆ ಕುಳಿತಿಹಳೊ ಹೃದಯ
ಝಲ್ಲೆನುತ್ತಿದೆ ಮನೆಯ ಘನತೆಗ
ದೆಲ್ಲಿಯಪಪ್ರಥೆ ತಹಳೊ ತಿಳಿಯೆನು
ಫುಲ್ಲಲೋಚನ ಪೊರೆಯಬೇಕೆಂದಳಲಿದಳು ಜನನಿ ೬೦

ಹೊಟ್ಟೆಪಾಡಿಗೆ ದಟ್ಟಿಗಟ್ಟುತೆ
ಚಿಟ್ಟೆತೆರದಲಿ ಪರಿಯುತಲೆಯುತ
ಪಟ್ಟಣದ ವೀಥಿಯಲಿ ಕಟ್ಟಣಿಯಹ ಕಲಾವತಿಯು
ಕಟ್ಟುಪಾಸದಲೆಲ್ಲಿ ಮಿಟ್ಟನೆ
ನಿಟ್ಟುಸಿರನಿಟ್ಟಿಹಳೊ ದುರ್ವಿಧಿ
ಯಿಟ್ಟ ಕಟ್ಟಳೆಯೆನುತ ಕಟ್ಟೊರಲಿದಳು ಮರುಕದಲಿ ೬೧

ಮಗಳ ಬರವನು ತಾಯಿ ಕಾಣುತ
ಲುಗಿವ ಕಂಗಳ ಧಾರೆ ಪುಳಕದಿ
ನಗುತ ಕೇಳ್ದಳು ನಿನ್ನೆ ಪೊರಟವಳಿಂದು ಬಂದಿಹೆಯ
ಮಗಳೆ! ನೀನೆಲ್ಲಿರ್ದೆಯಿರುಳೊಳು
ಜಗವು ನಗದಿರಲಹುದೆ ನಮ್ಮನು
ಬಗೆಯನರಿಯೆನು ನಿನ್ನ ಮನದಂತಸ್ಥವೇನೆಂಬೆ ೬೨

ಉಳಿದೆನೇತಕೆ ಕೇಳು ಪೇಳ್ವೆನು
ಬಳಿಯೆ ಸಾರಲು ವಿಪ್ರನೊರ್ವನ
ನಿಲಯಕೈದಿದೆ ಭಿಕ್ಷೆ ಪಡೆಯಲು ಪುಣ್ಯಫಲದಿಂದ
ಬಳಗವೆರಸುತ ಗೈಯುತಿರ್ದನು
ನಳಿನನಾಭನ ಸತ್ಯಪೂಜೆಯ
ನಲವಿನಿಂ ಕಥೆಗೇಳಿ ಭಿಕ್ಷೆಯ ಪಡೆದು ಬಂದಿಹೆನು ೬೩

ಉದುರೆ ಕಣ್ಣೀರವಳ ನಯನದೊ
ಳೊಡನೆ ರೋಮಾಂಚನವ ತಳೆಯುತ
ಲುದಿತಭಕ್ತಿಯನಾಂತು ನೆನೆದಳು ಸತ್ಯದೇವನನು
ವಿಧಿತವೆಮಗಿದು ಭಾಗ್ಯದೈಸಿರಿ
ಮುದುರಿದುದು ನಿರ್ಭಾಗ್ಯರಾದೆವು
ಪುದಿದುದೀ ದಾರಿದ್ರ್ಯ ಸತ್ಯನ ಮರೆತ ಕತದಿಂದ ೬೪

ಎನುತ ಲೀಲಾವತಿಯು ತತ್ಕ್ಷಣ
ನೆನೆದು ಮನದಲಿ ಪೂರ್ವಯೋಜಿತ
ವಿನುತದೇವಮುಕಂದ ಸತ್ಯನ ಪಿರಿಯ ನೋಂಪಿಯನು
ಧನ ವಿಹೀನತೆಯಾಂತು ತಿರುಗುತ
ಮನೆ ಮನೆಯ ಕೂಳುಂಬ ದುರ್ಗತಿ
ಯೆನಗೆ ಸಂಭವಮಾದುದೆನ್ನುತೆ ಮಮ್ಮಲನೆ ಮರುಗಿ ೬೫

ಪತಿಯ ಸುಳಿವನು ಕಾಣೆನಳಿಯನ
ಮತವದೇನೆಂಬುದನು ತಿಳಿಯೇನು
ಪತಿಯ ಹಂಬಲವಾಂತು ಕಂಬನಿಗರೆದು ತಿರುಗಿದಳು
ಸುತೆಯು ಸತ್ಯಾತ್ಮಕನ ಪೂಜೆಯ
ಹಿತದೆ ನಡೆಸುವ ಭಾಗ್ಯದಾ ಸನು
ಮತಿಯ ನೀಡಲಿ ಸುಖದಿ ವಣಿಜರು ಬರಲಿಯೆಂದೆನುತ ೬೬

ಸತ್ಯನಾರಾಯಣನ ನೋಂಪಿಯ
ಕೃತ್ಯವನು ಕೈಗೊಂಡಳಾಕ್ಷಣ
ದತ್ಯಧಿಕಪರಿತೋಷದಿಂ ಬಾಂಧವರ ಕೂಡಿಸುತ
ನಿತ್ಯರಾಜಿತಸತ್ಯದೇವನೆ
ಮೃತ್ಯುಪರಿಹರ ಭವ್ಯಮಹಿಮನೆ
ಮತ್ತಧಿಕದಯೆದೋರಿ ಪತಿಯಳಿಯರನು ತೋರೆನಲು ೬೭

ಚೂರಿಯಿರಿದಂತಾಯ್ತು ಹೃದಯದಿ
ನೀರುಕುದಿದಂತಾಯ್ತು ತಳಮಳ
ಮಾರಜನಕನ ಸತ್ಯದೇವನ ಮರೆತ ದೋಷದಲಿ
ಕ್ರೂರಶಿಕ್ಷಾ ಪ್ರಾಪ್ತವಾಯಿತು
ದೂರವಾದರು ಸಕಲಬಾಂಧವ
ರಾರೆನಗೆ ದಿಕ್ಕೆನುತ ಮಮ್ಮಲಮರುಗಿದಳು ತರಳೆ ೬೮

ಚಂದ್ರಮುಖಿ ನಿಶ್ಚಲದಿ ಗೈದಾ
ರುಂದ್ರಮಹಿಮಾನ್ವಿತದ ನೋಂಪಿ ಫ
ಣೀಂದ್ರತಲ್ಪನ ಹೃದಯ ತಾಕಿತೊಯೆಂಬ ತೆರದಿಂದೆ
ಚಂದ್ರಕೇತಗೆ ನಿದ್ರೆಯಲಿ ರಾ
ಜೇಂದ್ರ! ಸೆರೆಯಾಳಾಗಿರುವ ವಣಿ
ಜೇಂದ್ರರನು ಬಿಡುಯೆಂದು ಶ್ರೀಹರಿಯಾಜ್ಞೆ ನೀಡಿದನು ೬೯

ಅಲ್ಲದಿರಲೀ ರಾಜ್ಯಕೋಶಗ
ಳೆಲ್ಲ ವೈಭವವನ್ನು ಮೆಟ್ಟುತ
ಲಿಲ್ಲದಂತೆಸಗುವೆನು ವಂಶವನೆನುತ ಮರೆಯಾದ
ತಲ್ಲಣಿಸಿತಾ ಭೂಪಹೃದಯವು
ಗಲ್ಲಣೆಯನಾಂತಿವರು ಭಕ್ತರು
ಖುಲ್ಲರೇ ಶಿಕ್ಷಿಪನು ಹರಿಯೆಂದುಪ್ಪವಡಿಸಿದನು ೭೦

ಬಳಿಕಲಾ ಶಶಿಕೇತು ಮರುದಿನ
ತಿಳಿಸಿ ತನ್ನಾ ಸ್ವಪ್ನ ಸಂಗತಿ
ಬಳಿಗೆ ದೂತರ ಕರೆಸಿ ಬಂಧಿತ ವಣಿಜರಿರ್ವರನು
ಬಳಲಿಸದೆ ತಹುದೆಂದು ತಿಳುಪಲು
ಸುಳಿದು ತಂದಿರ್ವರನಿರಿಸಿದರು
ಬಳಿಯೆ ಕೈಕೋಳಗಳ ಸಡಲಿಸಿ ರಾಜಸಮ್ಮುಖದಿ ೭೧

ವಣಿಜರಿಬ್ಬರು ನಡುಗಿ ಪುನರಪಿ
ಹೆಣಗಲೇನಿಹುದೆನುತ ಚಿಂತಿಸಿ
ಗೊಣಗುತಿರ್ದರು ಮನವಿ ಸಲ್ಲಿಸಲನುವನಾಂತಿರಲು
ಗಣನೆಯಾನುತೆ ಪೂರ್ವದನುಭವ
ವಣಗಿ ನಿಂದರು ಮೂಕಭಾವದಿ
ಮಣಿದು ಜನಪಗೆ ವಿನಯಪೂರ್ವಕವಿಸ್ಮಿತಾನನದೆ ೭೨

ಕಷ್ಟ ಸಂಭವ ದೈವಯೋಗವು
ದೃಷ್ಟಿ ದೋಷನಿಮಿತ್ತವೈಸಲೆ
ತುಷ್ಟಿಯಾದಪುದಿನ್ನು ಬಾಧೆಯ ನೀಗಿ ನೀವೆನುತ
ಕೃಷ್ಣಶೃಂಖಲೆಗಳನು ತೆಗೆಸಿಯ
ದೃಷ್ಟವಂತರು ನೀವು ದೇಶಕೆ
ಹೃಷ್ಟಮಾನಸರಾಗಿ ತೆರಳುವುದೆಂದನಾ ಭೂಪ ೭೩

ಸಂದ ಸಂಕಷ್ಟಮಿದು ನಿಮಗೀ
ಬಂಧನಾಲಯ ವಿಧಿವಿಲಾಸವು
ಮುಂದೆ ಸುಖವಹುದೀ ಪರಿಯ ದುರ್ದೈವವಿರದೆನುತ
ಅಂದವಳಿದಾನನಕೆ ಸೆರೆಮನೆ
ಬಂಧನಕೆ ನಿಷ್ಕೃತಿಯ ಗೈಸುತ
ಲಂದದುಪಚಾರೋಕ್ತಿಯಲಿ ಸಂತೈಸಿದನು ಭೂಪ ೭೪

ತನ್ನ ವಶಮಾಗಿರ್ದ ವಣಿಜರ
ಸನ್ನುತದ್ರವ್ಯಾದಿವಸ್ತುಗ
ಳನ್ನು ಕೊಡಿಸುತ ಮತ್ತನಿತು ಸಂಪದವನನುಗೊಳಿಸಿ
ಮನ್ನಿಸಿತ್ತನು ಭೂಮಿಪನು ನೀ
ವಿನ್ನು ಪೋಗಲಹುದೆನೆ ವರ್ತಕ
ರುನ್ನತಾನುಗ್ರಹವು ನಿಮ್ಮದೆನುತ್ತ ಗಮಿಸಿದರು ೭೫

ಕೇಳು ಶೌನಕಮುನಿಲಲಾಮನೆ!
ಹೇಳಲೇನದು ವಣಿಜರೋಲಗ
ಶಾಲೆಯಿಂದಾ ಚಂದ್ರಕೇತುವಿನಾಣತಿಯನಾಂತು
ವೇಳೆಯಲಿ ಕುಲದೇವತಾರ್ಚನೆ
ಪಾಳಿಯಲಿ ನೆರೆ ಗೈದು ಭೂಸುರ
ಜಾಲವನು ಸಂತೈಸಿ ದಾನಗಳಿಂದ ತೆರಳಿದರು ೭೬

ವರಯತಿಯ ವೇಷವನು ಧರಿಸುತೆ
ಭರದೆ ಗೋಚರಿಸಿದನು ದೇವನು
ಪರಿಕಿಸಲು ಬೇಕಿವನ ಮನವನೆನುತ್ತ ಲೀಲೆಯಲಿ
ಸರಿದು ಸನಿಹಕೆ ವಣಿಜಮುಖ್ಯನೆ!
ತರಣಿಯಲ್ಲಿಹುದೇನು ಪೇಳೆನೆ
ಸಿರಿಯ ಮದದಿಂ ಬೀಗಿ ಪರಿಹಾಸ್ಯದಲಿ ಪೇಳಿದನು ೭೭

ಕಾರಣವದೇನುಂಟು ತಿಳಿಯಲು
ಚೋರಯತಿ ನೀ ಭಾವಿಸಲು ಸರಿ
ದೋರದಿರ್ಪುದು ಹಣವ ದೋಚಲು ಯತ್ನವಿದು ನೋಡೆ
ಮೀರಿ ನುಡಿಯದೆ ಪೋಗು ನಿನ್ನಯ
ದಾರಿವಿಡಿಯುತ ನಾವೆಯಲಿ ನಿ
ಸ್ಸಾರದೆಲೆವಳ್ಳಿಗಳು ತುಂಬಿಹವೆಂದನಾ ವೈಶ್ಯ ೭೮

ಅಟ್ಟಹಾಸದ ಪರುಷವಾಕ್ಯವ
ನೆಟ್ಟನಾಲಿಸುತಾ ಯತೀಂದ್ರನು
ದಿಟ್ಟತನದಲಿ ಸಟೆಯ ನುಡಿಯುವ ವಣಿಜಗೇನೆನಲಿ
ಬೆಟ್ಟಮಾದುದು ಪಾಪ ಸಟೆಯಿಂ
ಶೆಟ್ಟಿ ನುಡಿದಂತಾಗಲೆನ್ನುತ
ಬಿಟ್ಟು ಜಾಗವ ಕಡಲ ತೀರದಿ ನಿಂದನೋಸರಿಸಿ ೭೯

ಯತಿಯ ಸಾಗಿಸಿ ತಾನು ಸರಿದನು
ಮತಿವಿಕಳನಾ ವೈಶ್ಯತಿಲಕನು
ಮಿತದ ನಿತ್ಯದ ಕರ್ಮವೆಸಗಲು ಕಡಲ ದಂಡೆಯಲಿ
ಅತಿಹಿತದೆ ತಾ ಬಂದು ಕಂಡನು
ಜತನದಿಂದಾ ದೋಣಿ ತೇಲಲ್
ವ್ಯಥಿತಮಾನಸನಾಗಿ ನಿಂದನು ಕೌತುಕವಿದೆಂದು ೮೦

ಬೆಚ್ಚಿ ಬೆವರಿದ ಕಂಡು ಹಡುಗನು
ಬಚ್ಚಬರಿಯೆಲೆವಳ್ಳಿಗಳು ತಾ
ನುಚ್ಚರಿಸಿದಂತಾಯ್ತು ಬಜ್ಜರ ಮಾಯಗೊಂಡಿರಲು
ಪಚ್ಚೆರತ್ನಗಳಿಲ್ಲವಾದುವು
ಮೆಚ್ಚಿನಿಂದಲಿ ಪಡೆದ ಸಂಪದ
ನುಚ್ಚುನೂರಾಯ್ತೆನುತ ಬಿದ್ದನು ಧರೆಗೆ ಮೂರ್ಛೆಯಲಿ ೮೧

ಬಳಿಕ ವರ್ತಕ ತಿಳಿವನಾನುತೆ
ತಳಮಳದಿ ಬೆಬ್ಬಳಿಸುತಿರಲವ
ನಳಿಯನೈತಂದಲ್ಲಿಯುಪಚರಿಸುತ್ತ ಪೇಳಿದನು
ಕಳವಳಿಸದಿರು ಮಾವ! ನಮ್ಮಯ
ಬಳಿಗೆ ಬಂದಾ ಯೋಗಿವರ್ಯನ
ಛಲದ ಶಾಪವಿದೆಮಗೆ ಗತಿಮತಿಯಾತ ಶರಣೆಂದ ೮೨

ತೆರಳು ತಳುವದೆ ಶೀಘ್ರಗತಿಯಲಿ
ಶರಣುವೋಗುವ ಯತಿವರೇಣ್ಯನ
ಚರಣಕಮಲವ ತನ್ನಿವಾರಣವಾತ ಕರುಣಿಸಲಿ
ನಿರುತಮಿದು ಸಂದೇಹಮೆತ್ತಣ
ದರಿಯಲಾ ಸಂನ್ಯಾಸಿ ನಮ್ಮನು
ಪೊರೆಯುತೀವನು ಸಕಲಸಂಪದವೆನಲು ಜಾಮಾತ ೮೩

ಅಳಿಯನಾಡಿದ ನುಡಿಯನಾಲಿಸಿ
ಕಳೆದು ಚಿಂತೆಯ ತೋಷವಾನುತೆ
ಸುಳಿದನಾ ಸಂನ್ಯಾಸಿಯಿರುವೆಡೆಗಾಗಿ ವೇಗದಲಿ
ಬಳಿಗೆ ಸಾರುತಲೆರಗಿ ವಿನಯದ
ಲಳುಕುಬೇಗುದಿಯಲ್ಲಿ ಬೇಡಿದ
ಹಳಿದು ತಮ್ಮಯ ನೋಯಿಸಿದೆನಾಂ ಮನ್ನಿಸುವುದೆಂದು ೮೪

ಬಾರಿಬಾರಿಗೆ ನಮಿಸಿ ವಣಿಜನ
ಪಾರಸಂಪದ ಕಳೆದ ಚಿಂತೆಗೆ
ಚೀರಿಡುತ ಮಮ್ಮಲಮರುಗಿ ಗೋಳಿಡುತ ಬೇಡಿದನು
ಪಾರುಗಾಣಿಸಬೇಹುದೆನ್ನಯ
ಸಾರವಸ್ತುಗಳೆಲ್ಲ ದೊರಕಿಸಿ
ತೋರು ಕರುಣವನೆಂದು ನಮಿಸಿದ ಯತಿಯ ಪದಯುಗಕೆ ೮೫

ಮುಳಿದನಾ ಯತಿವರನು ಬಣಜಿಗ
ನಳಲಿನುತ್ಕರ್ಷತೆಗೆ ಬುದ್ಧಿವಿ
ಕಳನೆ ತನ್ನಯ ಪೂಜೆಗೈಯದೆ ಪಾಪಿ ನೀನಾದೆ
ಅಳುವೆಯೇತಕೆ ಬರಿದೆ ನಿನ್ನನು
ಬಳಲಿಸಿದವನೆ ನಾನು ಸಂಕಟ
ಗೊಳಿಸಿದವನೇ ನಾನು ನನ್ನಾಣತಿಯಿದೆಲ್ಲವೆನೆ ೮೬

ಘನತೆಗೌರವಮಿರ್ದು ಪೂರ್ವದೆ
ವಿನಯಭಾವದೊಳೆನ್ನಪೂಜೆಯ
ತನಯ ದೊರಕಲು ಮಾಳ್ಪೆನೆಂದಾತುರದಿ ನುಡಿಗೆಟ್ಟೆ
ನೆನಪಿಹುದೆ ಸಂಕಲ್ಪ ಶೂನ್ಯನೆ
ಮನವನೀಡಾಡುತಲಿ ಕದಡಿದೆ
ವನಿತೆ ಸೂಚಿಸಲಾಗಲಾ ಬೇಹಾರವಾಯದಲಿ ೮೭

ಅರಿಯೆ ನೀನೇಂ ಮತಿವಿಹೀನನೆ
ಪರಿವೆ ನಿನಗುಂಟೇನು ಪುತ್ರಿಯು
ದೊರೆಕೊಳಲು ತಾರಾಡುತವಳುದ್ವಾಹವ್ಯೆತರಲಿ
ಪರಿಣಯದೊಳಾಂ ಗೈವೆನೆಂದೆಂ
ದಿರದೆ ಪೊರಮಡಲಿಲ್ಲವೇ ಸತಿ
ಯರುಹಲದನೀಕ್ಷಿಸದೆ ನೋಂಪಿಯ ಮರೆತೆ ನೀನೆನಲು ೮೮

ಅಜಸುರೇಂದ್ರಾದ್ಯಮರಸಂತತಿ
ಭಜಿಸಿ ತಣಿಯರು ನಿನ್ನ ನಾಮದ
ನಿಜವ ಕಾಣಲು ನಿನ್ನ ಮಾಯಾಮೋಹಜಾಲಗಳ
ತ್ರಿಜಗವಂದ್ಯನೆ ನನಗೆ ಸಾಧ್ಯವೆ?
ನಿಜವನರಿಯಲೆನುತ್ತ ಚರಣಾಂ
ಬುಜಕೆ ಮಣಿಯುತೆ ಯತಿಯ ಕೊಂಡಾಡಿದನು ಮನದಣಿಯೆ ೮೯

ಸಿಲುಕಿ ಮಾಯಾಪಾಶಬಂಧದಿ
ತೊಳಲುತಿರುವುದು ದೇವನಿಕರವು
ತಿಳಿವನೆಂತೀ ಮೂಢಮಾನವ ನಿನ್ನ ಮಹಿಮೆಯನು
ಜಲರುಹಾಂಬಕ ಸತ್ಯಚರಿತನೆ
ಮುಳಿದು ನಿಂತರೆ ಉಳಿಯಲೆಂತುಟು?
ಸಲಹು ಮಮತೆಯೊಳೆಂದು ಹುಯಿಲಿಡುತಿರ್ದನಾ ವೈಶ್ಯ ೯೦

ಬಿಡದೆ ನಡೆಸುವೆ ನಿನ್ನ ಪೂಜೆಯ
ಸಡಗರದಿ ತಥ್ಯವಿದು ಪೂಜ್ಯನೆ!
ದೃಢಭಕುತಿ ನೀಡೆನಗೆ ನಿನ್ನಡಿಗಾನು ಪೊಡಮಡುವೆ
ಮೃಡನ ಮಿತ್ರನೆ ಲೋಕದೊಡೆಯನೆ
ಕಡಲಜಾತೆಯ ಪತಿಯೆ ಕರುಣದಿ
ಜಡತೆಯನು ತೊಲಗಿಸುತ ಮತಿಯನು ನೀಡು ನೀನೆಂದ ೯೧

ನೀನೆಕೃಷ್ಣನು ನೀನೆ ಜಿಷ್ಣುವು
ನೀನೆ ಸರ್ವವು ಸರ್ವಭರಿತನು
ನೀನೆ ಜಗದಾನಂದಕಾರಕ ರಾಮ ಗೋವಿಂದ
ನೀನೆ ಜಗದಾದ್ಯಂತರಹಿತನು
ನೀನೆ ಭುವನಾಧಾರ ಮಾರಕ
ನೀನಲಾ ಸರ್ವೇಶನೆನ್ನುತೆ ವಣಿಜ ವಂದಿಸಿದ ೯೨

ದೇವ ನಿನ್ನಯ ಪಾದಸೇವೆಯ
ದಾವ ಜನ್ಮದ ಪುಣ್ಯಫಲಮಿ
ನ್ನಾವ ಹಿರಿಯರು ಪೂರ್ವದೊಳು ನೆರೆ ಗೈದ ಸತ್ಕೃತಿಯೊ
ಭಾವಿಸಲ್ಕಿದು ಚೋದ್ಯಮಪ್ಪುದು
ಕಾವುದೈ ತವ ಪಾದಪೂಜೆಯ
ಗೈವೆನತಿಶಯಭಕ್ತಿಯಿಂದಲಿ ದಯೆಯ ತೋರೆಂದ ೯೩

ದೇವದೇವನೆ! ನಿನ್ನ ಪದರಾ
ಜೀವಕೆರಗುವೆ ಪರಮಭಕ್ತಿಯೊ
ಳೀವುದಿಷ್ಟಾರ್ಥಗಳ ನಿನ್ನಯ ಬಗೆಯನನುಕರಿಸಿ
ಭಾವಿಸುತಲೆನ್ನೆದೆಯ ಮರುಕವ
ಕಾಣುವುದೆನ್ನನು ಕೈವಿಡಿದು ಕರು
ಣಾವಲೋಕನದಿಂದಲೆನ್ನುತೆ ಪಿಡಿದ ಹರಿಪದವ ೯೪

ವಣಿಜನಾರ್ತಾಲಾಪವಾಲಿಸಿ
ತಣಿದು ಭಾವವನರಿತುಕೊಳ್ಳುತೆ
ಹಣದ ರಾಶಿಯ ಕನಕರತ್ನವನಿತ್ತು ಮರೆಯಾದ
ಫಣಿಶಯನ ಶ್ರೀಹರಿಯು ಭಕ್ತರ
ತಣಿಸಲೆಳಸಿದೊಡೇನನೀಯನು
ಮಣಿವ ಭಕ್ತರ ಪೊರೆಯಲಲಸನು ಎಂದನಾ ಸೂತ ೯೫

ಕರೆದು ಪರಿವಾರವನು ತನ್ನಯ
ಕರದೆ ಪುಳಿನದಿ ಸತ್ಯದೇವನ
ಭರದಿ ರಚಿಸುತೆ ಪೂಜೆಗೈದನು ಭಕ್ತಿಭಾವದಲಿ
ಪರಮಕರುಣಾಸಿಂಧುವೀತನು
ಮರೆತು ಮೆರೆದೆನು ಬೆಳ್ತನದೊಳೆಂ
ದರಿತು ಬಿನ್ನಹಗೈದು ತನ್ನಯ ಪುರಕೆ ಹೊರವಂಟ ೯೬

ಊರ ಸನಿಹದೆ ಕಂಡು ವೈಶ್ಯನು
ತೋರಿ ನುಡಿದನಳಿಯನೆ! ನಿಜಪುರ
ಸಾರಿ ಬರುತಿದೆ ನೋಡು ಕಾಂತಿಯ ಬೀರುತೀ ಕಡೆಗೆ
ಮೀರಿ ಬಹ ಸಂತೋಷವಾನುತೆ
ತೀರ ಸೇರಲು ನಾವೆ ವಹಿಲದಿ
ಸಾರಿ ಕೋಶಾಧ್ಯಕ್ಷಗರುಹಿದ ಹೋಗಿ ಬಾರೆಂದು ೯೭

ನಡೆದನಾತನು ವಣಿಜ ಸದನಕೆ
ದಡದಡಿಸಿ ಲೀಲಾವತಿಯ ಕಂ
ಡೊಡನೆ ನಮಿಸುತ ಕರವ ಜೋಡಿಸಿ ನುಡಿದನಿಂತೆಂದು
ಒಡೆಯನೈತಂದಿಹನು ಕೇಳೌ
ಒಡತಿ ನಿಜಜಾಮಾತನೊಡನೆನೆ
ಕಡುತವಕದಿಂದಾಕೆ ಸತ್ಯನ ನೆನೆದು ಪೊರಮಡಲು ೯೮

ಮಗಳ ಕರೆಯುತ ನುಡಿದಳಾಕೆಗೆ
ಸೊಗದ ವಾರ್ತೆಯ ತಂದನೀತನು
ಜಗದೊಡೆಯನಾ ಸತ್ಯದೇವಕೃಪಾಕಟಾಕ್ಷದಲಿ
ಸುಗುಣವಂದ್ಯನ ಸತ್ಯದೇವನ
ಲಗುಬಗೆಯಲಾರಾಧಿಸುತ್ತಾ
ಮಗಳನೆಚ್ಚರಗೊಳಿಸಿ ನಡೆದಳು ಪತಿಯ ದರ್ಶನಕೆ ೯೯

ಜನನಿ ಪೇಳ್ದಾ ನುಡಿಯ ಲಾಲಿಸಿ
ಘನಕೃಪಾಕರ ಸತ್ಯನಾಥನ
ವಿನಯದಿಂ ತಾ ರಚಿಸಿ ನೋಂಪಿಯ ನಡೆದಳಾತುರದೆ
ಮನದ ಹರ್ಷವನೇನ ಪೇಳಲಿ
ತನುಜೆ ಸತ್ಯಸಪಾದಭಕ್ಷ್ಯವ
ತಿನದೆ ಹೊರಟಳು ಪತಿಯ ಕಾಣಲತೀವಸಂಭ್ರಮದೆ ೧೦೦

ಅಷ್ಟು ಮಾತ್ರಕೆ ಸತ್ಯಪುರುಷನು
ರುಷ್ಟನಾಗುತ ಪತಿಯ ಸೆಳೆದನು
ಸುಷ್ಠುನಾವೆಯ ಸಕಲರತ್ನದ ರಾಶಿಗಳ ಸಹಿತ
ಕಷ್ಟದಿಂ ಪಾರಾದ ಅಳಿಯನ
ದೃಷ್ಟಿ ಪಥದಿಂದತ್ತ ನೂಂಕಿದ
ನಿಷ್ಟದಿಂ ಧಾವಿಸೆ ಕಲಾವತಿ ಪತಿಯ ಸುಳಿವಿಲ್ಲ ೧೦೧

ಪತಿಯ ಕಾಣದೆ ಕಟ್ಟಳಲೊಳಾ
ಕ್ಷಿತಿಯನಪ್ಪಿದಳಾ ಕಲಾವತಿ
ಸುತೆಯ ರೋದನ ನಾವೆ ಮುಳುಗಿರೆ ಕಾಣುತಾ ವೈಶ್ಯ
ಕೃತಕವೇನಿದು ನೋಡಲೀ ದು
ರ್ಗತಿಯು ಬರಲಿದು ಕರ್ಮಪಾಕವೆ
ನುತಲಿ ನಿಂದನು ಮೂಕಭಾವದಿ ಬವಣೆಯನು ತಾಳಿ ೧೦೨

ನಾವೆಚಾಲಕರಿದನು ಕಾಣುತ
ಭಾವಗುಂದುತಲೇನಿದಚ್ಚರಿ
ತಾವರಿಯೆವೆಂದ್ಯೆದಿದರು ಯೋಚಿಸುತಲಾ ಕ್ಷಣದಿ
ಧಾವಿಸುತಲೈತಂದು ಜನನಿಯಿ
ದಾವಗತಿ ಸುತೆಗೆಂದು ಬೆದರುತ
ಗಾವಳಿಸಿ ಕಡುಮರುಗಿ ನುಡಿದಳು ಪತಿಯ ಸನಿಹದಲಿ ೧೦೩

ಈಗಳಿಂತೇಕಾಯ್ತು ರಮಣನೆ!
ಸಾಗಿ ಬಂದನು ಸೊಗವನೀಯಲು
ನೀಗಿದನು ಜಾಮಾತೃ ಜಲದಲಿ ನಮಗೆ ಮೈದೋರಿ
ಸೋಗಿದೇನಿನ್ನಾವ ದೇವನ
ಬೀಗಿನಿಂದಲಿ ದೂಷಿಸಿದೆವೋ
ಭೋಗಿಶಯನಮಹತ್ತ್ವವೆಂತುಟೊ ಪೇಳ್ವರಾರೆಂದು ೧೦೪

ಪತಿಪದಾಂಬುಜಕೆರಗಿ ಶೋಕಿಸಿ
ಸುತೆಯ ಬಳಿಗೈತಂದು ಬಿಗಿದ
ಪ್ಪುತಲಿ ವಿಹ್ವಲಳಾಗಿ ಕಂಬನಿದುಂಬಿದಳು ಜನನಿ
ಪತಿಯಳಿಯೆ ತಾನುಳಿಯೆನೆನ್ನುತ
ಲತಿಶಯದಿ ಗೋಳಿಡುತ ಜಾತೆಯು
ಪತಿಯ ಹಾವುಗೆಯಾಂತು ಹೊರಟಳು ಸಹಗಮನಕೆಳಸಿ ೧೦೫

ಮಗಳ ದುಃಸ್ಥಿತಿ ಕಂಡು ಬಣಜಿಗ
ಬೆಗಡುಗೊಳ್ಳುತ ಖೇದವದನದಿ
ಹಗರಣವಿದೇನಿಂದು ಪುನರಪಿ ಪಾಪಿ ತಾನೆನುತ
ತೆಗಳಿದನು ದುರ್ವಿಧಿಗೆ ತನ್ನಯ
ಮಗಳ ನಲ್ಲನ ಮಗ್ಗಿದವನಾ
ವಿಗಡಖಗಪತಿವಾಹನನೆ ತಾನೆನುತ ಚಿಂತಿಸಿದ ೧೦೬

ಆತ ಮಹಿಮಾತೀತ ಭುವನದೊ
ಳಾತನಿಗೆ ಸರಿದೊರೆಯನರಿಯೆನು
ಭೂತಳದೊಳಾ ಸತ್ಯನಾರಾಯಣನ ನೋಂಪಿಯನು
ಸಾತಿಶಯದೊಳು ಮಾಳ್ಪೆನೆನ್ನುತ
ಪ್ರೀತಿಯಲಿ ಬರಹೇಳಿ ಸಕಲರ
ಮಾತು ಮಾತಿಗೆ ಸತ್ಯದೇವನ ಮಣಿದು ತುತಿಸಿದನು ೧೦೭

ಕಮಲನಾಭನೆ ಕಮಲನೇತ್ರನೆ
ಕಮಲೆಯರಸನೆ ವಿಮಲಗಾತ್ರನೆ
ನಮಿತಕುಂಜರಪಾಲ ಗೋಪೀಬಾಲ ಗೋಪಾಲ
ಅಮಿತಕರುಣಾಸಿಂಧು ನೀನಹೆ
ಕಮಲಸಂಭವಪಿತನೆ ನಿನ್ನಯ
ಕಮಲಪಾದಕೆ ನಮಿಪೆನೆನ್ನೊಳು ಕೃಪೆಯ ಮಾಳ್ಪುದೆನೆ ೧೦೮

ಭಕ್ತವಾರಿಧಿಚಂದ್ರ ಸುಜನಾ
ಸಕ್ತನಿರ್ಮಲಕರಣನಿಧಿ ಸು
ವ್ಯಕ್ತವಾಣಿಯಲಿಂತೊರೆದನೆಲೆ ವಣಿಜ! ತವಜಾತೆ
ಭಕ್ತಿಭಾವದೊಳೆನ್ನ ಭಜಿಸಿ ವಿ
ರಕ್ತಿ ತಳೆಯುತ ಮತ್ಪ್ರಸಾದಕೆ
ರಕ್ತಿಯಾನುತೆ ಧಾವಿಸಿಹಳಾ ಪತಿಯ ದರ್ಶನಕೆ ೧೦೯

ಅದುವೆ ಕಾರಣವಾಯ್ತು ನಲ್ಲನ
ಸುದತಿಯರಿಯದೆ ವಿಲಪಿಸಲು ನಿಜ
ವಿದುವೆ ಕೇಳೆಲೆ ವೈಶ್ಯ! ಭಾವಿಸೆ ನಿನ್ನ ತನುಜಾತೆ
ಸದನಕೈದುತ ಮತ್ಪ್ರಸಾದವ
ಮುದದೆ ಸೇವಿಸಿ ಬಂದಳಾದಡೆ
ಪದುಳದಿಂದಲಿ ಪತಿಯ ಕಾಂಬಳು ನಿಜವು ಕೇಳೆನಲು ೧೧೦

ಇಂತುಟಾಲಿಸಿ ವಣಿಜಸುತೆ ತಾ
ನಂತರಕ್ಷಿದ ವಾಣಿಯನು ನಿಜ
ಕಾಂತದರ್ಶನಕಾಂಕ್ಷೆಯಿಂದಲಿ ಭವನಕೈದಿದಳು
ಕಂತುಪಿತನ ಸಪಾದಭಕ್ಷ್ಯವ
ನಂತೆ ಭುಂಜಿಸಿ ಭರದಲೈತರೆ
ಕಾಂತ ಕಂಡನು ಪರಿಜನಾವೃತನಾಗಿ ತರಣಿಯಲಿ ೧೧೧

ನೆರೆದಖಿಳಪರಿವಾರ ಬೆಕ್ಕಸ
ಬೆರಗುಗೊಂಡಿತು ಕುತುಕ ಮನದಿಂ
ದುರುತರಾನಂದವನು ಪಡೆದರು ಸತ್ಯಕೃಪೆಯಿಂದ
ಪರಮಮಂಗಳಗಾತ್ರ ಶುಭಗುಣ
ಚರಿತ ಸಜ್ಜನವಿನುತ ಪರಮಾ
ದರದಿ ರಕ್ಷಿಸು ರಕ್ಷಿಸೆಂದೆರಗಿದರು ಕೈಮುಗಿದು ೧೧೨

ಬಳಿಕ ಜನಕನ ಬಳಿಗೆ ಸಾರುತ
ನಳಿನಲೋಚನೆಯಾ ಕಲಾವತಿ
ನಳಿನನಾಭನ ಕರುಣೆಯೊದಗಲು ಪುಣ್ಯತರಮಲ್ತೆ
ಕಳೆದ ವಸ್ತುಗಳೆಲ್ಲ ಲಭಿಸಿದು
ವಳಿಯ ದೊರಕಿದ ವಿಧಿವಿಲಾಸದ
ಲುಳಿಯಲೇತಕೆ ಮನೆಗೆ ತೆರಳುವೆವಿನ್ನು ನಡೆಯೆನಲು ೧೧೩

ಮಗಳ ನುಡಿಯನು ಕೇಳಿ ವರ್ತಕ
ಬಗೆಯ ಪರಿತೋಷದಲಿ ನೆನೆದನು
ಖಗವಿರಾಜಿತಸತ್ಯದೇವನ ಪುಣ್ಯಕೃಪೆಯೆಂದು
ಸೊಗವನಿತ್ತಾ ಸತ್ಯವರ್ಯನ
ಲಗುಬಗೆಯಲರ್ಚಿಸಿ ಯಥಾವಿಧಿ
ತೆಗೆದು ಸಕಲೈಶ್ವರ್ಯವೆಲ್ಲವ ಧಾಮಕೈದಿದನು ೧೧೪

ಅಂದು ಮೊದಲಾ ವೈಶ್ಯತಿಲಕನು
ಕುಂದೆಣಿಸದಾಜೀವಪರ್ಯಂ
ತಂದದಲಿ ಹುಣ್ಣಿಮೆಯು ಸಂಕ್ರಮಣಾದಿ ದಿನಗಳಲಿ
ಮಂದರೋದ್ಧರ ಸತ್ಯನಾಥನ
ಕುಂದದಾನಂದದಲಿ ಪೂಜಿಸಿ
ಹೊಂದಿ ಸುಖವನು ಕಡೆಗೆ ಸತ್ಯನ ಪದವ ಸೇರಿದನು ೧೧೫

* * *

ಕುಸುಮ ೫

ಸೂಚನೆ : ಗೋಪರಿತ್ತ ಸಪಾದಭಕ್ಷ್ಯವ
ಭೂಪ ಧಿಕ್ಕರಿಸುತಲಿ ಬಹು ಸಂ
ತಾಪವಾನುತೆ ಸತ್ಯಕೃಪೆಯಲಿ ಮರಳಿ ಸುಖಿಯಾದ

ಕೇಳು ಶೌನಕಮುನಿಕುಲಾಗ್ರಣಿ!
ಪೇಳಲೇನಾ ಸತ್ಯಮಹಿಮೆಯ
ಬಾಳಿಗೊಂದಿಸಿ ವ್ರತವ ನಡೆಸಲು ಬಾಳು ಹಸನಹುದು
ಸೋಲಿರದು ಮಾಳ್ಪರಿಗೆನಲು ಮುನಿ
ಜಾಲ ತೃಪ್ತಿಯನಾಂತು ಮೆರೆದುದು
ಭೂಲಲಾಮನ ಕಥೆಯ ಪೇಳುವೆನೆಂದನಾ ಸೂತ ೧

ಪೂರ್ವದೊಳು ತುಂಗಧ್ವಜಾಹ್ವಯ
ನೊರ್ವ ಭೂಪತಿಯತುಳಸೌಖ್ಯದೊ
ಳುರ್ವಿಯಾಳಿದ ಪರಮಧಾರ್ಮಿಕನಾಗಿ ವೈಭವದಿ
ಸರ್ವಸಾಕ್ಷಿಯನೊಲಿಸಿ ತನ್ನಾ
ಸರ್ವಜನಪದದೇಳ್ಗೆ ಬಯಸುತ
ಸರ್ವರಂ ಪಾಲಿಸಿದನತಿಶಯಕೀರ್ತಿಯನು ಗಳಿಸಿ ೨

ಒಮ್ಮೆಯಾತನು ಸತ್ಯದೇವನ
ಬಿಮ್ಮಿನಿಂದ ಸಪಾದಭಕ್ಷ್ಯವ
ಹಮ್ಮಿನಿಂ ತೊರೆದಖಿಳಕಷ್ಟದ ರಾಶಿಯನುಭವಿಸಿ
ದುಮ್ಮನದಿ ತಾ ಬಳಲಿ ಮರುಗುತ
ಲೊಮ್ಮನದೆ ಸತ್ಯೇಶನರ್ಚನೆ
ನೆಮ್ಮಿ ಗೈದಾ ಕಥೆಯ ಪೇಳುವೆ ಕೇಳಿ ನೀವೆಂದ ೩

ತುಂಗವಿಕ್ರಮ ಭೂತಲಾಧಿಪ
ತುಂಗಕೇತನನೊಂದುಕಾಲಕೆ
ಭಂಗಪಟ್ಟನು ಧಾಳಿಯಿಡಲಾ ಕ್ರೂರಮೃಗನಿಕರ
ಅಂಗವಣೆಯಲಿ ಬೇಟೆಯಾಡಲು
ಸಂಗಗೊಳಿಸುತ ಬೇಂಟೆಗಾರರ
ತಂಗಿದನು ವಿಪಿನಾಂತರದಿ ನಿಜರಾಜ್ಯ ರಕ್ಷಣೆಗೆ ೪

ನುಗ್ಗಿದನು ಸೋಹಿನಲಿ ಮೃಗಕುಲ
ದಗ್ಗದಾಹವಕಡ್ಡವಿಸುತಲಿ
ಬಗ್ಗಸೂಕರ ಸಿಂಗ ಕೋಡುಗ ಚಿರತೆ ತೋಳಗಳ
ಮಗ್ಗಿದರು ಹೇರಾಳಹೊಯ್ಲಲಿ
ಸಗ್ಗ ಸೂಗಕಿಂಬಾಯ್ತು ನಮಗೆನು
ತುಗ್ಗಡಿಸಿ ತಿರುಗಿದನು ದೇಶಕೆ ತುಂಗಕೇತನನು ೫

ಬೆಬ್ಬರಿಸುತಡಹಾಯ್ದು ಬೊಬ್ಬಿಡು
ತಿಬ್ಬದಿಯಲೋಡೋಡಿ ಪರಿಯುತ
ಲೊಬ್ಬರೊಬ್ಬರು ವಿವಿಧಕೈದುವನೆಸೆದು ಮುಸುಕಿದರು
ತಿಬ್ಬದೊಳಗಲ್ಲಲ್ಲಿ ಸುಳಿಯುತ
ಲುಬ್ಬಟೆಯಲಾ ಕಾಳ್ಮಿಗಂಗಳ
ಕಬ್ಬಿಲರು ಸೀಳಿದರು ಕಬ್ಬನು ಸೀಳುವಂದದಲಿ ೬

ಸೂಕರಾದ್ಯಖಿಳಮೃಗಸಂತತಿ
ಭೀಕರಾಕೃತಿಯಿಂದ ಚೀರುತ
ಲೋಕರಿಸಿ ಧರೆಗುರುಳಿ ಹೊರಳುತ ನೀಡು ಸುಯ್ವಿಡಲು
ಚಾಕಚಕ್ಯತೆಯಲ್ಲಿ ಹೊಡೆಯುವ
ರಾಕೆವಾಳರು ನಿಶಿತಬಾಣದಿ
ನೂಕಿ ಹರಣವ ಭರದಿ ಸೂಗರಿಸುತ್ತ ಚೀತ್ಕರಿಸಿ ೭

ಗಾಟಳಿಸಿದಾ ಕಾಳ್ಮಿಗಂಗಳ
ಬೇಟೆಯಾಟದಿ ನುಗ್ಗಿ ನುಗಿಸುತ
ಸೂಟಿಯಲಿ ರಾಜೇಂದ್ರ ದಣಿದನು ಸುತ್ತಿ ಬೇಸತ್ತು
ಕಾಟಕರೊಡನೆ ವಿವಿಧಬೇಂಟೆಯ
ಮಾಟಗಳ ಸಂಭಾಷಿಸುತ್ತಲಿ
ದಾಟಿದನು ದುರ್ಧರದ ವಿಪಿನವ ಬೇಂಟೆ ಸಾಕೆನುತ ೮

ಅಟನದಿಂದಾಯಾಸಗೊಳ್ಳುತ
ಚಟಲಗತಿಯಲಿ ನಡೆಯಲಾರದೆ
ವಟಕುಜದ ತಡಿಯಲ್ಲಿ ಕುಳಿತನು ದಣಿವನಾರಿಸಲು
ಇಟಕಿನಾ ಭೂರುಹದ ಸನಿಹದಿ
ದಿಟಬಕುತಿಭಾವದಲಿ ಗೋವಳ
ರಟವಿಯಲಿ ವರಸತ್ಯದೇವಾರ್ಚನೆಯ ಗೈಯುತಿರೆ ೯

ಕಂಡು ಕಾಣದ ತೆರದಿ ಮೌನದಿ
ಮಂಡಿಸಿರ್ದನು ತುಂಗಕೇತನ
ಮಂಡಲೇಶ್ವರ ನೊಂದ ಮಾನಸನಾಗಿ ಬಸವಳಿದು
ಕುಂಡಲೀಶ್ವರಶಯನಪಾದಕೆ
ದಿಂಡುಗೆಡೆಯದೆ ಸನ್ನಿಧಿಯಲು
ದ್ದಂಡತನದಲಿ ಮೆರೆದುಪೇಕ್ಷಿಸುತಿರ್ದನಾ ಭೂಪ ೧೦

ಇಂತಿರಲು ಗೋವಳರು ನೆನೆಯುತ
ಲಂತರಂಗದಿ ಸತ್ಯಪೂಜೆಯ
ನಂತಗೊಳಿಸುತಲೆತ್ತಿ ಕಪ್ಪುರದಾರತಿಯ ಬೆಳಗಿ
ಮುಂತೆ ಕೆಲದಲಿ ಮಂಡಿಸಿಹ ಸಿರಿ
ವಂತಭೂಪತಿ ತುಂಗಕೇತಗ
ನಂತತಲ್ಪಸಪಾದಭಕ್ಷ್ಯವ ನೀಡಲೈದಿದರು ೧೧

ಇದನು ಕಾಣುತ ಭೂಮಿಪಾಲಕ
ನುದಿತ ಮಮಕಾರಾಂಧಭಾವದಿ
ಸದಯಶ್ರೀಸತ್ಯೇಶನೂಲುಮೆಗೆ ಕುಂದನೆಸಗುತ್ತ
ಹದನದೇನೆಂದರಿಯಲೆಳಸದೆ
ವದನ ತಿರುಹುತ ವರಸಪಾದವ
ಗದರಿ ತೊರೆಯಲು ಬೆದರುತೋಡಿದರಾಗ ಗೋವಳರು ೧೨

ರುಕ್ಷತನದಲಿ ಮೂರ್ಖನಂದದಿ
ಭಕ್ಷ್ಯನೈವೇದ್ಯವನು ತೊರೆಯುತ
ಲಕ್ಷಿಸುತ್ತಲಿ ತನ್ನ ರಾಜ್ಯವ ಕುರಿತು ಹೊರವಂಟ
ಇಕ್ಷುಚಾಪನ ಪಿತನು ಭೂಪನ
ಶಿಕ್ಷಿಸಲು ಮನಗೈದು ಕೋಪದಿ
ರಕ್ಷಣೆಯೊಳಿರ್ದಖಿಲಸಂಪದವನ್ನು ಪಾಳ್ಗೈದ ೧೩

ನೂರುಮಕ್ಕಳು ಮರಣವೈದಿರೆ
ಮಾರಜನಕನ ಕೋಪದುರುಬೆಗೆ
ಘೋರಶಿಕ್ಷೆಯು ಜನಪಗಾದುದು ಪೇಳಲೇನುಂಟು
ಕಾರಣವದೇನರಿದು ಪೂರ್ವದ
ಲಾರ ಹೀನೈಸಿದೆನೊ ತನಯರ
ನಾರ ಕೊಂದೆನೊ ತಿಳಿಯಲರಿಯದು ಪಾಪಿ ತಾನೆಂದ ೧೪

ಇದಕೆ ಸಂದೆಗವಿಲ್ಲ ಗೋವಳ
ರುದಿತಸಂಪ್ರೀತಿಯಲಿ ತನ್ನೆಡೆ
ಸದರದಲಿ ತಂದಿತ್ತು ನುಡಿದರು ದೈವಕೃಪೆಯೆಂದು
ಪುದಿದಹಂಭಾವದಲಿ ಜರೆದೆನು
ಕುದಿಯುತಿರುವೆನು ಮನದ ಶೋಕಾಂ
ಬುಧಿಯ ಮಧ್ಯದೊಳೀಗಲೆನ್ನುತ ಮರುಗಿದನು ಭೂಪ ೧೫

ಭೂರಿಶೋಕವ ತಳೆದು ವಿಪಿನದ
ದಾರಿವಿಡಿದಿರೆ ಸತ್ಯದೇವನ
ಸಾರಿ ಭಜಿಸುತ ಗೋಪವೃಂದವು ಭಕ್ತಿಭಾವದಲಿ
ನೀರಜಾಕ್ಷನ ಪೂಜಿಸುತ್ತಲಿ
ಮೇರೆಮೀರಿದ ಲಳಿಯಲಿರುತಿರೆ
ಚಾರುಮಂಟಪದೆಡೆಗೆ ಭೂಪತಿ ಬಂದನೊಲವಿಂದ ೧೬

ಮರಳಿ ಬಿಜಯಂಗೈದ ಭೂಪತಿ
ಯಿರವ ತುರುಗಾಹಿಗಳು ನೋಡುತ
ಲೆರಗಿದರು ತಳ್ಳಂಕಭಾವದಿ ಲೋಪದೋಷಗಳ
ಮರೆದು ನಮ್ಮನು ಕಾವುದೆಂದನು
ತುರೆ ಸಖೇದಾಶ್ಚರ್ಯಮನದಲಿ
ತಿರೆಯರಸನಹ ತುಂಗಕೇತಗೆ ತಪ್ಪಿದವರಂತೆ ೧೭

ಗೋವಳರ ಸಂತೈಸಿ ನುಡಿದನು
ಭಾವದುನ್ಮಾದದಲಿ ನೃಪತಿಯು
ಭಾವಜಾತನ ಪಿತನ ಪುಣ್ಯಸಪಾದವೆನಗೀಯೆ
ನೀವು ಬಂದಿರೆ ತೆಗಳಿದೆನು ದು
ರ್ಭಾವದೊಳಗಾ ಕತದಿ ತನಯರು
ಸಾವನಪ್ಪಿದರೆನ್ನ ಸಂಪದ ನಾಶವಾಯ್ತೆಂದ ೧೮

ಫಲಿತಮಿದು ದುಷ್ಕರ್ಮದೆಸಕಕೆ
ಸಲಿಲಜಾಕ್ಷನ ದಿವ್ಯಮಹಿಮೆಯೊ
ಳುಳಿದವನು ನಾನೊಬ್ಬ ಮಹಿಯಲಿ ಸಾಕ್ಷಿಯೆಂದೆನಿಸಿ
ಅಳಿದು ಹೋದರು ನೂರುಮಕ್ಕಳು
ಕಳೆದು ಹೋಯಿತು ಕೋಶವೆಲ್ಲವು
ಹೊಳೆವ ಧನಧಾನ್ಯಾದಿ ಸಂಪದವೆಂದನಾ ಭೂಪ ೧೯

ಪರಮಭಾಗ್ಯವಿದೆನ್ನದೆನ್ನುತ
ಹರಿಯ ಕರುಣೆಯ ನೆನೆದು ಚಿತ್ತದೊ
ಳರುಹಿರೆನಗಾ ಸತ್ಯದೇವ ವ್ರತವಿಧಾನವನು
ವಿರಚಿಸುವೆ ನಾನೆನಲು ಗೋಪರು
ಹರುಷದಿಂದಲಿ ಪೇಳ್ದರೆಲ್ಲವ
ನರಸಗೈದನು ಸತ್ಯಪೂಜೆಯ ಗೋಪರೊಡಗೂಡಿ ೨೦

ಸುಜನಪಾಲಕ ರಾಮಣೀಯಕ
ನಿಜಗುಣಾನ್ವಿತ ಭಕ್ತಪೋಷಕ
ನಜಭವೇಂದ್ರಾದ್ಯಖಿಳವಂದಿತ ಲೋಕಭೂಷಣನೆ
ಭುಜಗಭೂಷಣಮಿತ್ರವರ್ಯನೆ
ಭಜಿಸಿ ನುತಿಸುವೆನಳ್ತಿಯಿಂದಲಿ
ಗಜವರೇಣ್ಯನ ಸಲಹಿದಾತನೆ ಕೃಪೆಯ ಮಾಡೆಂದ ೨೧

ಸತ್ಯನಾಥನೆ ಸತ್ಯದೇವನೆ
ಸತ್ಯಕಾಮನೆ ಸತ್ಯರೂಪನೆ
ಸತ್ಯಪುರುಷೋತ್ತಮನೆ ನತಜನಸತ್ಯಜೀವೇಶ
ಸತ್ಯಮಂಗಳರೂಪ ಸೌಮ್ಯನೆ
ಸತ್ಯನುಡಿವಗೆ ಮೋಕ್ಷದಾತನೆ
ಸತ್ಯಮಹಿಮೋಪೇತ ದಯೆದೋರೆಂದನಾ ಭೂಪ ೨೨

ತುಂಗಕೇತನಭೂಪ ಗೋವಳ
ಸಂಗವೆರಸುತಲಿಂತು ನೇಮದಿ
ರಂಗನಾಥನ ಭಜಿಸಿ ಪೂಜಿಸೆ ನೊಂದ ಹೃದಯದಲಿ
*ಪಿಂಗಳಾಧಿಪಸಖನು ಸತ್ಯನು
ಹಿಂಗಿದಾ ಸಂಪದವ ಕರುಣಾ
ಪಾಂಗನಿತ್ತನು ನೂರು ಸುತರನು ಸಕಲಭಾಗ್ಯಗಳ ೨೩

ತುಂಗಕೇತನ ಭಕ್ತಿಭಾವದಿ
ಮಂಗಳಾಂಗನ ಭಜಿಸುತರ್ಚಿಸು
ತಂಗಜಾತನ ಪಿತನ ಕರುಣವ ಹೊಂದಿ ಸುಖಿಯಾಗಿ
ಹಿಂಗಿದಾ ವ್ಯಸನಾಂತರಂಗದಿ
ಸಂಗಡಿದ್ದರ ವಂದಿಸುತ್ತಲಿ
ಭಂಗವಿಲ್ಲದೆ ಬಾಳಿ ಕಡೆಯಲಿ ಸಗ್ಗಕೈದಿದನು ೨೪

* * *

* ಪಿಂಗಳಾಧಿಪ = ಕಪಿರಾಜ, ಸುಗ್ರೀವ

ಕುಸುಮ ೬

ಸೂಚನೆ : ರಾಘವನು ಲವಣಾಬ್ಧಿಯುಬ್ಬರ
ದೋಘಕಾಶಂಕಿಸುತ ಸತ್ಯನ
ನಾಗಲರ್ಚಿಸಿ ಸೇತು ನಿರ್ಮಿಸಿ ಲಂಕೆ ಸೇರಿದನು

ಶೌನಕಾದ್ಯರೆ! ಕೇಳಿ ಪೇಳ್ವೆನು
ಸಾನುರಾಗದೊಳೇಕಭಾವದಿ
ಭಾನುವಂಶೋತ್ಪನ್ನರಾಘವನೀ ವ್ರತವ ಗೈದು
ದಾನವೇಶನ ಪುರವ ಸೇರಲ
ದೇನು ಸೋಜಿಗವೆನಲು ಸೇತುವ
ವಾನರರ ಕೈಯಿಂದ ರಚಿಸಿದನೆಂದನಾ ಸೂತ ೧

ಕೇಳಿ ಮುನಿಕುಲ ವಿಸ್ಮಿತಾನನ
ತಾಳಿ ಮೆಯ್ವೆರ್ಚಿನಲಿ ಮುನಿಕುಲ
ಮೌಳಿ ನುಡಿ ನುಡಿ ಧರ್ಮಮೂರ್ತಿಯ ದಿವ್ಯಸಂಗತಿಯ
ಬಾಳಬಂಧನಮೋಕ್ಷವೀಯುವ
ನೀಲವರ್ಣನು ಸೇತುಬಂಧನ
ವೇಳೆಯಲಿ ವ್ರತವೇಕೆ ಗೈದನು ಪೇಳಿ ನೀವೆನಲು ೨

ಕೇಳಿ ಬಲ್ಲಿರಿ ನೀವು ವರಮುನಿ
ಜಾಲ ತ್ರೇತಾಯುಗದಿ ನಿರುತವು
ಸೋಲರಿಯದಾ ಹಂತಿದೇರನ ವಚನಪಾಲನೆಗೆ
ನೀಲಮೇಘಶ್ಯಾಮರಾಘವ
ನೇಳೆರಡು ಬರಿಸಗಳು ವನದಲಿ
ಬಾಳಲೆಂದೈದಿದನು ಸೀತಾಲಕ್ಷ್ಮಣರ ಕೂಡಿ ೩

ಅಲ್ಲಿ ಗೋದಾವರಿಯ ತೀರದಿ
ಯುಲ್ಲಸದೊಳಿವರೆಸಗಿದೆಲೆವನೆ
ಯಲ್ಲಿ ಸುಮಹಾನಂದಹೃದಯದಿ ವಾಸವಾಗಿರಲು
ಖುಲ್ಲರಾವಣ ಯತಿಯ ವೇಷದೊ
ಳಲ್ಲಿಗೈತಂದಿಳೆಯ ಕುವರಿಯ
ಹೊಲ್ಲತನದಲಿ ಕದ್ದು ಪೋದನು ಗಗನಮಾರ್ಗದಲಿ ೪

ರಾಮಚಂದ್ರನು ತಪ್ತಹೃದಯದಿ
ಕಾಮಿನಿಯನರಸುತ್ತ ಚಿತ್ತ
ಭ್ರಾಮಕತೆಯಲಿ ಘೋರಕಾಂತಾರದಲಿ ಸಂಚರಿಸೆ
ಭೂಮಿಯಲಿ ಹೊರಳುತ್ತ ನವೆದಾ
ವ್ಯೋಮಗಾಮಿ ಜಟಾಯುವಿಂದಲಿ
ಭೂಮಿಜಾತೆಯ ಹರಣವಾರ್ತೆಯನರಿದು ಪರಿತಪಿಸಿ ೫

ಬರುತ ಮಾರ್ಗದೊಳಾ ಕಬಂಧಾ
ಸುರನ ಸೀಳುತಲಗ್ನಿ ಸಾಕ್ಷ್ಯದಿ
ಗರುವ ಸುಗ್ರೀವನೊಳು ರಾಘವ ಸಖ್ಯ ಬೆಳಸಿದನು
ಕರೆಸಿ ವಾನರ ವೀರರೆಲ್ಲರ
ಧರಣಿಜೆಯನರಸುತ್ತಲಾಕೆಯ
ಕುರುಹ ತಹುದೆಂದುಗ್ರದಾಣತಿಯಿತ್ತ ಸುಗ್ರೀವ ೬

ಹನುಮ ಲಂಕಾಪುರದಶೋಕಾ
ವನದೆ ಸೀತೆಯ ಕಂಡವಳ್ಗವ
ೞನಿಯ ರಾಮನ ಪೊಲಬು ತಿಳಿಸುತ್ತಲಿರೆ ಸಮ್ಮುದದೆ
ಹನನಗೊಳಿಸಿದ ತಂಡ ತಂಡದಿ
ದನುಜರೆಲ್ಲರು ಧಾಳಿಯಿಡಲಾ
ದನುಜರಾವಣನನ್ನು ನುಡಿಸುತ ಲಂಕೆಯನು ದಹಿಸಿ ೭

ಬಳಿಕ ಚೂಡಾಮಣಿಯ ಪಡೆಯುತ
ಜಲಧಿ ದಾಂಟಿದನುತ್ಸುಕತೆಯಲಿ
ಜಲರುಹಾಂಬಕ ರಾಮಸನ್ನಿಧಿಗೈದಿ ವಾರ್ತೆಯನು
ತಿಳುಹಿ ನಮಿಸಲು ರಾಮ ಮನ್ನಿಸು
ತಳಲಿ ಸುಗ್ರೀವಾದಿವಾನರ
ಬಲಸಹಿತ ಹೊರವಂಟ ಲಂಕೆಯ ಧೂಳಿಪಟಗೈಯೆ ೮

ಸೇರಿ ತೆಂಕಣ ಕಡಲ ದಂಡೆಯ
ಶೂರವಾನರಸೈನ್ಯಭರದಲ
ಪಾರ ಪಾರಾವಾರದುಬ್ಬರದಬ್ಬರವ ಕಂಡು
ಧೀರ ರಾಘವ ದಿಗ್ಭ್ರಮೆಯಗೊಳು
ತೋರೆನಿಂತಿಹ ವಾನರೇಂದ್ರಗೆ
ತೋರಿ ನುಡಿದನಿದಾವ ಬಗೆಯಲಿ ದಾಂಟಲಹುದೆನುತ ೯

ವಾಯುತನಯನು ತನ್ನ ಶಕ್ತಿಯ
ದಾಯದಲಿ ದಾಂಟಿರೆ ಕಡಲನಸ
ಹಾಯಕಲಿ ಮೂವತ್ತು ಕೋಟಿಯ ವಾನರಾವಳಿಯು
ಆಯತಿಕೆಯಿಂ ದಾಂಟಲಹುದೇ
ತೋಯನಿಧಿಯಿದಗಾಧಮಿಹುದೈ
ಪ್ರೀಯಸಖ ಸುಗ್ರೀವ ದಾಂಟುವುಪಾಯವನು ಪೇಳು ೧೦

ಅಣ್ಣ ರಾಘವ! ಮನುಜರಂತೆ ವಿ
ಷಣ್ಣನಾಗಲದೇಕೆ? ಸಾಸಿರ
ಗಣ್ಣ ಮೊದಲಾದಮರರೊದಗರೆ ನಿನ್ನ ನೆರವಿಂಗೆ
ತಿಣ್ಣನೇಕಿದಕಿಂತು ಚಿಂತೆಯೆ?
ಬಣ್ಣಿಸಲು ಪುರುಷೋತ್ತಮನು ನೀ
ಚಿಣ್ಣನಲ್ಲವೆ ನಾನು ಸೂಚನೆಯೊಂದ ಪೇಳುವೆನು ೧೧

ಕಡಲ ಕೂಲದಿ ಮುನಿಕುಲೋತ್ತಮ
ನೆಡೆಯಿಹುದು ಬಕದಾಲ್ಬ್ಯನಾಮಕ
ನೆಡೆಗೆ ತೆರಳುವುದಿಲ್ಲಿಗಾಶ್ರಮವರ್ಧಯೋಜನವು
ಜಡಜಭವಕಲ್ಪಗಳ ಕಂಡಿಹ
ನಡರದಾತನ ಮುದಿತನವು ಜಗ
ದೊಡೆಯ ನೀ ಬಹರಾತನನು ಸಲೆ ಕಾಣಬಹುದೆಂದ ೧೨

ಲಕ್ಷಿಸುತ ರವಿಸುತನ ನುಡಿಯನು
ರಕ್ಷಕನು ತಾನೆಂದರಿಯದೇ
ತ್ರ್ಯಕ್ಷಚಾಪವ ಭಗ್ನಗೊಳಿಸಿದ ರಾಘವೇಶ್ವರನು
ಆ ಕ್ಷಣದಿ ನಡೆತಂದು ಮುನಿಯ ಸ
ಮಕ್ಷದಲಿ ಸಾಷ್ಟಾಂಗವೆರಗುತೆ
ರಕ್ಷಣೆಯನೀಕ್ಷಿಸುತ ನಿಂದನು ನಮ್ರಭಾವದಲಿ ೧೩

ಕಂಡು ರಾಮನ ಮುನಿಯು ಪದುಳದಿ
ಚಂಡವಿಕ್ರಮರಾಮನೇ! ಕೋ
ದಂಡಪಾಣಿಯೆ! ಬಂದುದೆಲ್ಲಿಂ? ಶುಭವು ನಿನಗೆನಲು
ಅಂಡಲೆಯುತಿರಲುಗ್ರ ವಿಪಿನದಿ
ಪೆಂಡತಿಯನಪಹರಿಸಿ ರಾವಣ
ಕೊಂಡು ಪೋದನು ನೀನರಿಯದುದೆ ಯೆಂದನಾ ರಾಮ ೧೪

ರಕ್ಕಸರ ತಾಯ್ವೀಡು ಲಂಕೆಯು
ಠಕ್ಕಿನಾಲಯ ನಿಜದೆ ದನುಜರ
ಸೊಕ್ಕುಮುರಿಯಲು ಕೂಡಿ ಬಂದಿಹೆ ಸೈನ್ಯಸಾಗರವ
ಬೆಕ್ಕಸವು ಶರಧಿಯಿದು ದಾಂಟಲು
ತಕ್ಕುಪಾಯವ ಪೇಳ್ ಮುನಿಪ! ಮೈ
ಯಿಕ್ಕಿ ಬೇಡುವೆ ನಿನ್ನ ಚರಣಕೆಯೆಂದನಾ ರಾಮ ೧೫

ಇನಕುಲೋದ್ಭವ ರಾಮ! ಲಾಲಿಸು
ಮನದ ಸರ್ವಾಭೀಷ್ಟ ಸಲಿಸುವ
ಘನತರ ಶ್ರೀ ಸತ್ಯನಾರಾಯಣನ ವ್ರತಗೈಯೆ
ಕ್ಷಣದೊಳಗೆ ತಾ ವಿಜಯ ಬರ್ಪುದು
ಧನವಿಹೀನಗೆ ಧನುವು ಲಭಿಪುದು
ಜನುಮಜನುಮದಿ ಮನುಜಕೋಟಿಗೆ ಪುಣ್ಯಕರವಹುದು ೧೬

ಮೀಟೆನಿಪ ನೋಂಪಿಯನು ಗೈದೊಡೆ
ಸೂಟಿಯಲಿ ದೊರಕುವುದು ಸತ್ಫಲ
ನೀಟಿನಲಿ ಜಲಧಿಯನು ವಾನರಕೋಟಿ ಮೋಹರವು
ದಾಟಲಪ್ಪುದು ಮತ್ತೆ ರಕ್ಕಸ
ತೋಟಿಯನು ನಿರ್ಭೀತಿಯಿಂದಲಿ
ಪಾಟಿಸಲಹುದು ವಿಜಯ ನಿನ್ನದು ಯೆಂದನಾ ಮುನಿಪ ೧೭

ಸತ್ಯದೇವನ ವ್ರತವಿಧಾನವ
ಗತ್ಯವೆಂದಾ ಮುನಿಪ ಬೋಧಿಸಿ
ನಿತ್ಯನಿರ್ಮಲ ರಾಮ! ನೋಂಪಿಯ ನಡೆಸು ಭಕ್ತಿಯಲಿ
ಸ್ತುತ್ಯಬಲ ರವಿಸೂನು ವಾನರ
ರೊತ್ತಿನಲಿ ನೀನೆನುತ ನುಡಿಯ
ಲ್ಕುತ್ತಮಾಂಗವ ಬಾಗಿ ನಮಿಸುತೆ ರಾಮ ಬೀಳ್ಕೊಂಡ ೧೮

ಮರಳಿ ರಾಘವ ಕಡಲ ದಂಡೆಗೆ
ಭರದೊಳನುಜನ ಕೂಡಿ ಬರುತಾ
ತರಣಿಸಂಭವ ವಾನರಾದ್ಯರ ವೀರರೊಗ್ಗಿನಲಿ
ನಿರುಪಮೋನ್ನತ ಸತ್ಯದೇವನ
ತರತರದಿ ಪೂಜಿಸುತ ನಿಷ್ಠೆಯ
ಲಿರಲು ಮೊಳಗಿದುದೊಂದು ದನಿ ನಭದಿಂದಲಾ ಕ್ಷಣದಿ ೧೯

ವ್ಯಥೆಯ ಮಾಣು ಮಹಾನುಭಾವನೆ!
ಪ್ರಥಿತಶಿಲ್ಪಿಯು ವಿಶ್ವಕರ್ಮನ
ಸುತನು ನಳನೆಂಬವನು ನುರಿತವ ನಿನ್ನ ಮೋಹರದಿ
ಜತನದೊಳಗಾ ಸೇತು ನಿರ್ಮಿಸಿ
ಪಥವ ಮಾಳ್ಪನು ಲಂಕೆ ಸೇರಲು
ಹಿತವು ನಿನಗೆಂದುಲಿದುದಾ ತಾರಾಪಥದಿ ವಾಣಿ ೨೦

ಸಂಕದಾ ವಿನ್ಯಾಸವೈಖರಿ
ಯಂಕಪಟುಭಟ ನಳನ ಬುದ್ಧಿಗೆ
ಪಂಕಜಾಕ್ಷನ ಕರುಣೆಯೊದಗಿದುದೆಂಬ ರೀತಿಯಲಿ
ಸಂಕವೇರ್ಪಟ್ಟಿತ್ತಭೇದ್ಯದ
ಲಂಕೆಗೇನದನೊರೆವೆನಾ ಚಲ
ದಂಕವಿಕ್ರಮಿ ರಾಮ ನಡೆದನು ಸೈನ್ಯದೊಡಗೂಡಿ ೨೧

ರಕ್ಕಸನನಾ ರಾವಣನ ತರಿ
ದಿಕ್ಕಿ ಧರ್ಮವನೆತ್ತಿ ನಿಲ್ಲಿಸು
ತೆಕ್ಕತುಳ ಬಲನಾ ವಿಭೀಷಣಗಿತ್ತು ರಾಜ್ಯವನು
ಅಕ್ಕರೆಯ ಜಾನಕಿಯ ಕೈಕೊಂ
ಡುಕ್ಕುವಾ ಹರ್ಷದಲಿ ರಾಘವ
ಪೊಕ್ಕನಾ ಸಾಕೇತ ನಗರಿಯ ಸಕಲ ವಿಭವದಲಿ ೨೨

* * *

ಕುಸುಮ ೭

ಸೂಚನೆ : ಭೂಪನೊರ್ವ ಮಹೀಜಿತಾಖ್ಯನು
ಪಾಪಕರ್ಮದಿ ಸುತರ ಕಾಣದೆ
ತಾಪಸರ್ಕಳ ಪುಣ್ಯಲಾಭದೆ ಪಡೆದ ಸಂತತಿಯ

ತ್ರೇತೆಯಲಿ ರಘುವೀರ ಸತ್ಯನ
ನೋತು ಪೂಜಿಸಿ ವಿಜಯ ಪಡೆದಾ
ಖ್ಯಾತಚರಿತೆಯ ಕೇಳ್ದಿರಲ್ಲವೆ ಮುನಿಕುಲೋತ್ತಮರೆ!
ಈ ತೆರದ ನೋಂಪಿಯನು ಸುಜನ
ವ್ರಾತ ಮತ್ತಣ ಯುಗದೆ ಗೈದುದ
ನಾತುರದೆ ಲಾಲಿಪುದು ಪೇಳ್ವೆನು ಯೆಂದನಾ ಸೂತ ೧

ದ್ವಾಪರದೊಳಾದಿಯಲಿ ಸನ್ನುತ
ಭೂಪನೊರ್ವ ಮಹೀಜಿತಾಖ್ಯನು
ಪಾಪದೂರನು ಮೆರೆದ ಮಾಹಿಷ್ಮತಿಯ ನಗರದಲಿ
ವೈಪರೀತ್ಯವನೆಲ್ಲು ಕಾಣದ
ಕಾಪು ಮೆರೆದಿರೆ ಹಲವು ಕಾಲವು
ತಾಪವೊಂದಡರಿತ್ತು ನೃಪತಿಗೆ ಹರೆಯ ತೀರಿರಲು ೨

ಒಂದು ಕಾಲದೊಳಾ ಮಹೀಜಿತ
ನೊಂದುಗೂಡಿಸಿ ಪೌರಜನರನು
ನೊಂದ ಹೃದಯದಿ ಪುತ್ರಸಂತತಿಗೇನು ಹದನೆನುತ
ಅಂದು ಮನದಾತಂಕವೆಲ್ಲವ
ನೊಂದು ಬಿಡದೆಯೆ ವಿವರಿಸಿದನಿದ
ಕಿಂದುಪಾಯವ ಪೇಳಿ ನೀವೆಂದೆನುತ ಹಲುಬಿದನು ೩

ಶ್ರೀಪತಿಯನಾಂ ದೂಷಿಸಿಲ್ಲವು
ಪಾಪಕಾರ್ಯವನೆಸಗಲಿಲ್ಲವು
ವೈಪರೀತ್ಯದ ಸೊಮ್ಮುಲೇಶವ ಸಂಗ್ರಹಿಸಲಿಲ್ಲ
ಕೋಪದಲಿ ಬ್ರಹ್ಮಸ್ವ ಸೆಳೆಯೆನು
ಪಾಪಿಗಳನುಗ್ರದಲಿ ಶಿಕ್ಷಿಪೆ
ನೀ ಪರಿಯೊಳಾನಿರಲು ಸಂತತಿಯಿಲ್ಲವೇಕೆನುತ ೪

ಏನು ಕಾರಣ ವಿಪ್ರವರ್ಯರೆ!
ಸೂನುವಿಲ್ಲದೆ ವಂಶ ಬಳೆಯದು
ತಾನು ಪುತ್ರವಿಹೀನನಾದೆನು ತಿಳಿದು ಪೇಳಿರೆನೆ
ಸಾನುನಯದಲಿ ಕೇಳ್ದ ಪೌರರು
ಕಾನನವ ಸಾರಿದರು ಮುದದಿಂ
ಧ್ಯಾನನಿಯಮದಿ ಭೂಪಹಿತಚಿಂತನೆಗೆ ಮನಗೈದು ೫

ಇಂತು ಪುರಜನ ಬರುತಲಿರಲೋ
ರಂತೆ ಕಂಡರು ದಿವ್ಯತೇಜೋ
ವಂತ ಸಂಯಮಿ ಕ್ಷುತ್ಪಿಪಾಸೆಯ ತೊರೆದ ದೀರ್ಘಾಯು
ಅಂತರಂಗದಲಾರ[1] ವರ್ಜಿಸು
ತಂತೆ ಮೂರನು[2] ಮೀರುತೊಂದರೊ[3]
ಳಂತೆ ನಿಷ್ಠಾಬ್ರಹ್ಮಚರ್ಯದಲಿರ್ದ ಲೋಮಶನ ೬

ಈತ ದೊರೆತನು ನಮ್ಮ ಪುಣ್ಯದೊ
ಳೀತ ತೇಜಃಪುಂಜನಾಗಿಹ
ನೀತನನು ಮರೆವೊಕ್ಕೆವಾದಡೆ ಸಿದ್ಧಿ ತಮಗೆಂದು
ಮಾತುಮಾತಿಗೆ ಭಾವಿಸುತ ಸಂ
ಪ್ರೀತಿಯಲಿ ಪದಕೆರಗಿ ವಿನಯದೊ
ಳಾ ತಪೋನಿಧಿ ಕರುಣಿಪುದ ಕಾಯುತ್ತಲಿರಲಾಗ ೭

ದಿಂಡುಗೆಡೆದಾ ಪೌರನಿಕರವ
ಕಂಡು ಲೋಮಶ ಹರ್ಷಿಸುತ ಮುಂ
ಕೊಂಡು ನೀವ್ ಬರಲೇನು ಸಂಗತಿ ಪೇಳಿ ಹಾರುವರೆ!
ಕಂಡು ನನ್ನಯ ನುತಿಸಲೇತಕೆ?
ಖಂಡಿತವಿದೈ ಮನದಭೀಷ್ಟವ
ಮಂಡಿಸುವುದುಪಕೃತಿಯ ಜನ್ಮಕೆ ಸಾರ್ಥವಹುದೆಂದ ೮

ಎಮಗೆ ಜನಪ ಮಹೀಜಿತಾಖ್ಯನು ಕಮರಿಹೋಗಿದೆ ರಾಜವಂಶ
ಕ್ರಮದ ಬೆಳಸಿನ ಮನೆಯ ದೀವಿಗೆ ಪುತ್ರರಿಲ್ಲದೆಯೆ
ಗಮನಿಪನು ಪುರಜನವ ಸುತರೊಲು
ವಿಮಲಮಾನಸನಾಗಿ ರಕ್ಷಿಪ
ನಮಮ ಸತತವು ಪುತ್ರಕಾಂಕ್ಷೆಯೊಳಿರ್ಪನಾ ಜನಪ ೯

---

1. ಷಡ್ವೈರಿ, 2. ತ್ರಿಗುಣ, 3. ಪರಬ್ರಹ್ಮ

ವ್ಯಥಿತಮಾನಸನಾದ ಭೂಪನ
ಹಿತವರಾಗಿಯೆ ನಾವು ಬೇರೆಯ
ಪಥವ ಕಾಣದೆ ಬಂದೆವಿಲ್ಲಿಗೆ ತಪವನಾಚರಿಸೆ
ಕ್ಷಿತಿಪನತಿಶಯಸುಕೃತ ತಮ್ಮಡಿ
ಯತುಳದರ್ಶನವಾಯ್ತೆಮಗೆ ಭೂ
ಪತಿಗೆ ಸುತ ಸಂಪ್ರಾಪ್ತಿಯೆಂತುಟು ಪೇಳಿ ನೀವೆನಲು ೧೦

ಪೌರರಿಂಗಿತವರಿತು ಮುನಿಪನ
ಪಾರಕರುಣಾಪೂರ್ಣದೃಷ್ಟಿಯ
ಲಾರಯಿಸಿ ಮನದೊಳಗೆ ಪೂರ್ವದ ಜನ್ಮಸಂಗತಿಯ
ಭೂರಮಣ ಪೂರ್ವದಲಿ ಬಹಳ
ಕ್ರೂರವೃತ್ತಿಯಲಿರ್ದ ಬಾಹಿರ
ನೂರ ಸುತ್ತುತಲಿರ್ದ ರಂಕನು ವೈಶ್ಯಜಾತಿಯಲಿ ೧೧

ಒಂದು ಕಾಲಕೆ ವಣಿಜನೀತನು
ಸಂದ ಬಹುಳ ಜ್ಯೇಷ್ಠ ದಶಮಿಯೊ
ಳೆಂದು ತನ್ನಯ ವೃತ್ತಿಕಾರ್ಯನಿಮಿತ್ತ ಹೊರವಂಟ
ಅಂದು ಬಿಸಿಲಿಗೆ ಬಾಡಿಯುದಕದ
ಬಿಂದುವನು ತಾನೆಲ್ಲು ಕಾಣದೆ
ಬಂದನೀತನು ಪುರದ ಬಾಹೆಯ ಕೊಳದ ಪರಿಸರಕೆ ೧೨

ಜಲವನೀಂಟುತಲಿರಲು ಕೊಳದಲಿ
ಸಲಿಲವರಸುತಲಾಗ ತಾನೇ
ಬಲವಳಿದು ಕರುವಿಟ್ಟ ಹಸು ತಾ ಬಳಲಿ ಬಾಯಾರಿ
ಕೊಳದ ಬಳಿಗೈತಂದು ಹರುಷದಿ
ಜಲವ ಕುಡಿಯಲು ಬರಲು ಧೇನುವ
ಕೆಲಕೆ ದೂಡುತ ವೈಶ್ಯ ಪಾತಕರಾಶಿ ಗಳಿಸಿದನು ೧೩

ಕತನವಿಂತುಟು ತನಯರಿಲ್ಲದೆ
ವ್ಯಥಿತನಾಗಿರಲೀ ಜನುಮದೊಳ
ಗತಿಶಯದ ಸೌಭಾಗ್ಯದೊರಕಿದೆ ಪೂರ್ವಸುಕೃತವೆನೆ
ನುತಗುಣಾನ್ವಿತ ಮುನಿಲಲಾಮನೆ!
ಸ್ಮೃತಿಪುರಾಣಾದಿಗಳು ಪೇಳ್ವುವು
ಹಿತದ ಪುಣ್ಯಾಚರಣೆಯಿಂದಘ ನಾಶಮಹುದೆಂದು ೧೪

ಆವ ಪುಣ್ಯದ ಕಾರ್ಯವೆಸಗಲು
ಜೀವಿತದಲಾ ದುರಿತನಾಶನ
ಭೂವಧೂವರನಿಚ್ಛೆಯೊದಗಲು ಮಾಳ್ಪುದೇನುಂಟು?
ತಾವರಿದನುಗ್ರಹಿಸುತೆಮ್ಮನು
ಕಾವುದೆನ್ನುತ ಪೌರವೃಂದವು
ಭಾವಶುದ್ಧಿಯಲೆರಗಿದುದು ಸಾಷ್ಟಾಂಗದಲಿ ಮುನಿಗೆ ೧೫

ಪೌರರಿಚ್ಛೆಯ ಕೇಳ್ದು ಸಮ್ಮುದ
ಭಾರದಲಿ ಲೋಮಶನು ತನ್ನೊಳೆ
ಮಾರಜನಕನ ಮನದಿ ನೆನೆಯುತಲೇಕಚಿತ್ತದಲಿ
ಪೌರವರ್ಯರೆ! ಕೇಳಿ ಮೋದದಿ
ಭೂರಮಣನಾ ಸತ್ಯದೇವನು
ದಾರಸುವ್ರತ ಗೈಯೆ ಸುತನಾಗುವುದು ದಿಟವೆಂದ ೧೬

ಜನಪಗಾಗಿಯೇ ನೀವು ನೋಂಪಿಯ
ನನುನಯದೊಳಾಚರಿಸಿ ಸುಕೃತವ
ನನುಕರಿಸಿ ಸತ್ಫಲವ ಭೂಪನಿಗೆರೆಯೆ ಧಾರೆಯನು
ತನಯ ಜನಿಪನು ನಿಮ್ಮ ಭೂಪಗೆ
ಮನದ ಶಂಕೆಯ ತೊರೆಯಿರೆನ್ನಲು
ಮುನಿಪನಂಘ್ರಿಗೆ ನಮಿಸಿ ತೆರಳಿತು ಪೌರಸಂದೋಹ ೧೭

ತೆರಳಿ ನಗರಕೆ ಪೌರವೃಂದವು
ವರಕೃಪಾಕರಸತ್ಯನಾಥನ
ಪರಮನೋಂಪಿಯ ಗೈದು ಫಲವನು ನೃಪತಿಗರ್ಪಿಸಲು
ಅರಸಿ ಕಾಲದೆ ಗರ್ಭಧರಿಸುತ
ಲಿರದೆ ಹಡೆದಳು ಪುತ್ರನೊರ್ವನ
ದೊರೆಯು ಸಂತಸಗೊಂಡು ಪೌರರ ಕರೆದು ಮನ್ನಿಸಿದ ೧೮

* * *

ಕುಸುಮ ೮

ಸೂಚನೆ : ಹಳುವದಲಿ ತಾ ವ್ಯಥಿಸಿ ಧರ್ಮಜ
ನುಳಿದ ವರುಷಕೆ ಮುನ್ನ ವ್ಯಾಸರು
ಸುಳಿವುದೋರುತಲೊರೆಯೆ ಸತ್ಯನ ಭಜಿಸಿ ಜಯವಡೆದ

ಪ್ರೀತಿಯಿಂದಾಲಿಪುದು ಮುನಿಗಳೆ!
ಶೀತಕಿರಣಾನ್ವಯದಲಾ ವಿ
ಖ್ಯಾತನಾಮಕ ಧರ್ಮಸೂನುವು ಪರಮಭಕ್ತಿಯಲಿ
ಪೂತಸತ್ಯನ ನೋಂಪಿಯನ್ನ
ಜ್ಞಾತವಾಸಕೆ ಮುನ್ನಗೈಯುತ
ಲಾತ ಮನದಂಜಿಕೆಯ ತೊರೆದನು ಯೆಂದನಾ ಸೂತ ೧

ಹಿರಿದು ಹಿಗ್ಗಿತು ಮೌನಿಸಂಕುಲ
ವಿರದಲುತ್ಸುಕತೆಯಲಿ ಕೇಳಿತು
ನರಕಮರ್ದನಕೃಷ್ಣನೊಲ್ಮೆಯು ತಾನು ತುಂಬಿರಲು
ಪರಮಧಾರ್ಮಿಕ ಧರ್ಮನಂದನ
ಭರದೆ ನಡೆಸಲು ಸತ್ಯನೋಂಪಿಯ
ನುರುತರದ ಕಾರಣವ ಪೇಳೆನೆ ಸೂತನಿಂತೆಂದ ೨

ಪರಮಪಾವನಚಂದ್ರವಂಶದೊ
ಳರಸು ಧರ್ಮಜನಂದು ಜನಿಸಿದ
ನುರುತರದಯಾಶೀಲವಂತನು ಸಕಲಜೀವರಲಿ
ಧರೆಯ ರಾಜರೊಳಗ್ಗಳನೆನಿಸಿ
ಹರಿಣಧರ ಸೌಂದರ್ಯ ಶಾಲಿಯು
ನಿರುತವಾಕ್ಯನು ಶಕ್ರನಂತಿಹ ಸೂರಿಬಳಗದಲಿ ೩

ಆತನನುಜರು ಭೀಮಶೌರ್ಯ ಸ
ಮೇತರಾಗಿ ವಿಶುದ್ಧ ಮಾರ್ಗೋ
ಪೇತರಿದ್ದರು ಭೀಮ ಫಲ್ಗುಣ ನಕುಲ ಸಹದೇವ
ಖ್ಯಾತನಾಮರು ಪಾಂಡು ನೃಪ ಸಂ
ಜಾತರಾದೈವರು ಕುಮಾರರು
ವೋತು ಮದುವೆಯ ಮಾಡಿಕೊಂಡರು ದ್ರುಪದನಂದಿನಿಯ ೪

ಪತಿಗಳೈವರ ಮನವನೊಲಿಸುತ
ಲತಿಶಯದಿ ತಾಂ ಸೇವೆಗೈವಳು
ಪತಿಪರಾಯಣೆಯಾಗಿ ದ್ರೌಪದಿ ನಿತ್ಯಚರ್ಯೆಯಲಿ
ಸತತ ಭೂಸುರವೃಂದ ಸೇವಾ
ವ್ರತಳೆನಿಸಿ ತಾ ಪೂಜೆ ಮಾಳ್ಪಳು
ಪತಿತಪಾವನ ವಾಸುದೇವನ ನಿರುತ ನೆನೆಯುವಳು ೫

ಕೌರವೇಂದ್ರನ ಕಪಟಜೂಜಿಗೆ
ಮಾರುವೋಗುತ್ತಂದು ಧರ್ಮಜ
ನೂರ ಬಿಟ್ಟನು ಕಳೆದು ತನ್ನಯ ರಾಜ್ಯಕೋಶಗಳ
ನಾರಿಸೋದರರೊಡನೆ ವಿಪಿನದೊ
ಳಾರೆರಡುವತ್ಸರವ ಕಳೆಯುತ
ಮಾರುವೇಷವ ಧರಿಪ ಮುನ್ನಮೆ ಕಂಡ ಶುಕಪಿತನ ೬

ದೇವ! ವೇದವ್ಯಾಸಗುರುವರ!
ಭಾವಿಸಲು ನೀನೆಮಗೆ ಪೂಜ್ಯನು
ಕಾವುದೆಮ್ಮನು ಕೌರವಾದ್ಯರು ತಂತ್ರಕೌಶಲದಿ
ನೋವನೆಸಗದೆ ಬಿಡರು ತಮಗಿ
ನ್ನಾವ ಮಾರ್ಗವು ತೋರದಿಹುದೈ
ನಾವು ಮೈಮರೆದಿರಲಹುದು ದಿಟ ಮತ್ತೆ ವನವಾಸ ೭

ಅವರು ನಾನಾವಿಧದ ತಂತ್ರದ
ಕವಡುಬಿಜ್ಜೆಯಲೆಮ್ಮ ಗುರುತಿಸಿ
ತವಿಲನೆಸಗದೆ ಬಿಡರು ನಿಜವಿದು ನೀನೆ ಶರಣೆಮಗೆ
ಅವರು ಕಾಣದ ಪರಿಯಲೆಮ್ಮನು
ನವವಿಧಾನದಿ ಪೊರೆಯವೇಳ್ಪುದು
ಕವಿವ ತೊಡರನು ತೊಲಗಿಸೆಂದನು ನಯದೆ ಯಮಸೂನು ೮

ಮನದ ಶಂಕೆಯ ಮಾಣು ಧರ್ಮಜ!
ನಿನಗೆ ಯದುಕುಲತಿಲಕ ಕೃಷ್ಣನ
ಘನಕೃಪೆಯು ತಾ ಹಿರಿದು ಹನ್ನೆರಡಬುದ ಕಾನನದಿ
ತನುವ ಸವೆಸಿಹೆ ನೀನು ನಿನ್ನಯ
ವಿನಯಶೀಲಕೆ ಧರ್ಮನೀತಿಗೆ
ಸನುಮತದಿ ಕರೆಸುವುದು ವಿಹಿತವು ಕೃಷ್ಣಮೂರುತಿಯ ೯

ಹಿಂದೆ ಮುರರಿಪು ಕಮಲಸಂಭವ
ನಂದನಂಗುರೆ ಪೇಳ್ದನೋಂಪಿಯು
ಕುಂದುಕೊರತೆಗಳೆಲ್ಲ ನಾಶವು ತದ್ವ್ರತವ ಗೈಯೆ
ಬಂಧುರಪ್ರೇಮದಲಿ ನೀನು ಮು
ಕುಂದನನು ಬರಮಾಡು ಸಮ್ಮುದ
ದಿಂದ ಸಲಿಸುವ ನಿನ್ನಭೀಷ್ಟಂಗಳನು ವಹಿಲದಲಿ ೧೦

ಈತನೇ ಜಗದಾದಿದೇವನು
ಭೀತರಿಗೆ ಭಯದೂರ ಮಾಳ್ಪನು
ಪೂತಪಾಂಡವಪಕ್ಷಪಾತನು ನೀನರಿಯದುಂಟೆ?
ಏತಕೀ ಪರಿ ಚಿಂತೆಯಾನುವೆ?
ಕಾತರಿಸದಿರೆನುತ್ತ ತನ್ಮುನಿ
ಯಾ ತತುಕ್ಷಣ ಸತ್ಯನೋಂಪಿಯನೊರೆದು ಮರೆಯಾದ ೧೧

ಕ್ಷಣದಿ ಧರ್ಮಜ ಮೊರೆಯನಿಟ್ಟನು
ಫಣಿಪಶಾಯಿ ಮುಕುಂದ ವರದನೆ!
ಗುಣನಿಲಯ ಸರಸೀರುಹಾಂಬಕ ಕೃಷ್ಣ! ಪಾಹಿಯೆನೆ
ತಣಿದ ಮುರಹರ ನಿಮಿಷಮಾತ್ರದ
ಲಣುಗನಾಕ್ರಂದನವನಾಲಿಸಿ
ಚಣದಲೈತಹ ಮಾತೆಯಂದದಿ ಭರದಿ ನಡೆತಂದ ೧೨

ತುತಿಸಲೇತಕೆ ಧರ್ಮನಂದನ!
ಕತವದೇನಿಹುದೆನ್ನ ನೆನೆಯಲು
ಮತಿಯುತನೆ ಪೇಳಾವ ಕಂಟಕ ನಿಮಗೆ ನಾನಿರಲು
ಮತವಿದೆನ್ನದು ಪಾಂಡುಪುತ್ರರ
ಹಿತದ ರಕ್ಷಣೆಯೆನಲು ಮಾಧವ
ನತಿಶಯದ ದೈನ್ಯದಲಿ ಧರ್ಮಜನಿಂತು ಪೇಳಿದನು ೧೩

ಮುರವಿಮರ್ದನ ಲಾಲಿಸೆಮ್ಮಯ
ಹರಣಭರಣವು ನಿನ್ನದಾಗಿರೆ
ಪರಮಹರುಷದಿ ನಿನ್ನ ಭಜಿಸಿದೆ ಪಾರತಂತ್ರ್ಯದಲಿ
ನೆರವು ನಿನ್ನದು ಕಷ್ಟ ಸಮಯದ
ಲರಿಗಳಾ ದುರ್ಯೋಧನಾದ್ಯರು
ಹಿರಿಯುಪದ್ರವ ತಹರು ನಮಗಜ್ಞಾತವಾಸದಲಿ ೧೪

ವ್ಯಾಸಮುನಿವರನೊರೆದನಾ ಪರ
ವಾಸುದೇವನೆ ಸತ್ಯದೇವನು
ವಾಸವಾದ್ಯರ ಸಲಹುವಾತನು ದೀನರಕ್ಷಕನು
ತೋಷದಲಿ ನೀ ಬೇಗ ಭಜಿಸೆನ
ಲಾಶೆಯಿಂದಲಿ ನಿನ್ನ ಕರೆದನು
ಶ್ರೀಶ ಕೃಷ್ಣನೆ ನಮ್ಮ ಕಷ್ಟವ ಬಿಡಿಸಬೇಕೆಂದ ೧೫

ಭೀತಿ ಬೇಡೆಲೆ ಶಮನಸುತನ
ಜ್ಞಾತ ವಾಸದೊಳೆನ್ನನರ್ಚಿಸ
ಲಾತುಕೊಂಡಿಹ ತೊಡರಿನಿಂ ನೀಂ ಮುಕ್ತನಪ್ಪೆ ದಿಟ
ಸೋತ ರಾಜ್ಯವ ಮರಳಿ ಪಡೆಯುತ
ಭೂತಳಾಧಿಪನೆನಿಸಿ ಕುರುಸಂ
ಜಾತರನು ನಿರ್ಮೂಲಗೊಳಿಸುವಿರೆಂದನಾ ಶೌರಿ ೧೬

ವ್ಯಾಸನೊರೆದಾ ಪರಿಯೆ ಧರ್ಮನು
ಗಾಸಿಯಿಲ್ಲದೆ ಸತ್ಯರೂಪನ
ವಾಸುದೇವನ ಸಾಕ್ಷಿರೂಪದಿ ಭಜಿಸಿ ಪೂಜಿಸಲು
ಸೂಸಿ ಮಂದಸ್ಮಿತವ ಶ್ರೀವರ
ಲೇಸು ನಿನಗಜ್ಞಾತವಾಸದೊ
ಳಾಸೆ ನೆರವೇರುವುದು ಚಿಂತಿಸಬೇಡ ನೀನೆಂದ ೧೭

ಮನದಿ ಸಂತಸದಳೆದು ಧರ್ಮಜ
ವಿನಯಮಾನಸನಾಗಿ ನಮಿಸುತ
ಘನಕೃಪಾನಿಧಿಕೃಷ್ಣನೊಲುಮೆಯ ತಳೆದು ಹರಕೆಯನು
ತನುಜರೊಡನಾಜಿಯಲಿ ದುರ್ಯೋ
ಧನರ ಗೆಲ್ಲುತಲಾಂತು ವಿಜಯವ
ವನಿತೆ ಸೋದರಬಂಧುಬಾಂಧವರೊಡನೆ ಬಾಳಿದನು ೧೮

ಇಂತು ಹರಿಕಾರುಣ್ಯವಾಂತು ಕೃ
ತಾಂತಸುತನಜ್ಞಾತವಾಸವ
ನಂತಗೊಳಿಸುತ ಕೌರವಾದ್ಯರ ನಿಗ್ರಹಂ ಮಾಡಿ
ಸಂತವಣೆಯಲಿ ರಾಜ್ಯಸೂತ್ರವ
ನಾಂತು ನಿರ್ವಹಿಸುತ್ತ ಧರ್ಮದೊ
ಳಂತದಲಿ ಸಶರೀರಿಯಾಗಿಯೆ ಸಗ್ಗಕೇರಿದನು ೧೯

ಫಲಶ್ರುತಿ

ಪರಮಪುಣ್ಯವ್ರತವಿದಕೆ ತಾ
ನುರುತರಾಯತ ಮಹಿಮೆಯಿರ್ಪುದು
ನರರು ತಿಳಿದಿದನಂತರಂಗದಿ ಭಕ್ತಿಯುತರಾಗಿ
ಹರಿಯ ನಿಲಿಸುತೆ ಪೂಜೆಗೈಯಲು
ಧರೆಯ ಸರ್ವಾರ್ಥಗಳ ಪಡೆವರು
ನಿರುತವಿದು ಹರಿಪಾದಸೇರ್ವರು ಸತ್ಯವಿದು ಸತ್ಯ ೧

ಸತ್ಯ ವಿದು ಕಲಿಯುಗಕೆ ಭಾವಿಸೆ
ಸತ್ಯನಾರಾಯಣನ ನೋಂಪಿಯು
ಸತ್ಯಫಲದಾಯಕವು ನಿತ್ಯವು ಸತ್ಯದಲಿ ಸತ್ಯ
ಸತ್ಯಜನಕನು ಸತ್ಯಜನನಿಯು
ಸತ್ಯಜೀವನ ಸತ್ಯ ನಡೆನುಡಿ
ಸತ್ಯವೇ ಜಯವೆಂದು ನುಡಿದನು ರೋಮಹರ್ಷಣಿಯು ೨

ಪಲರು ನುತಿಪರು ಕಾಲನೆನ್ನುತ
ಪಲರು ಭಕ್ತಿಯಲೀಶನೆಂಬರು
ಪಲರು ಮಣಿವರು ಸತ್ಯನಾರಾಯಣನೆ ತಾನೆಂದು
ಪಲರು ಸತ್ಯನೆ ದೇವನೆಂಬರು
ಪಲರು ಸತ್ಯನ ಸತ್ತ್ವನೆಂಬರು
ಪಲರು ಬಹುವಿಧ ನಾಮದಿಂದಲಿ ಭಜಿಪರೀತನನು ೩

ಆವ ನಾಮದಿ ಭಜಿಸಿ ಪೂಜಿಸೆ
ಕಾವನೊಬ್ಬನೆ ದೇವ ನಮ್ಮನು
ಭಾವಭಕ್ತಿಗೆ ಮೆಚ್ಚಿ ತಳೆಯುವ ವಿವಿಧರೂಪಗಳ
ಭಾವಿಸಲ್ಕಳವಲ್ಲ ಮಹಿಮೆಯೊ
ಳೀವನಾತನು ಸಕಲಸಂಪದ
ಪಾವನಾತ್ಮನು ತಾನು ಸತ್ಯದ ರೂಪದೋಜೆಯಲಿ ೪

ಪಂಕಜಾಸನಜನಕ ತಿರುಪತಿ
ವೆಂಕಟೇಶನ ಚರಣಪಂಕಜ
ಕಿಂಕರನು ರಾಚ್ಮಾನ ಹಳ್ಳಿಯ ಕುತ್ಸಗೋತ್ರಜನು
ವೆಂಕಟಾಖ್ಯನು ಪುತ್ರಮಧ್ಯಮ
ಶಂಕರನು ನಾರಾಯಣಾರ್ಯನು
ಶಂಕೆಯಿಲ್ಲದ ಮನದಿ ರಚಿಸಿದ ಸತ್ಯಚರಿತೆಯನು ೫

ಮಂಗಳವು ವರಸತ್ಯನಾಥಗೆ
ಮಂಗಳವು ಘನಸತ್ಯಮೂರ್ತಿಗೆ
ಮಂಗಳವು ಸತ್ಯಾತ್ಮದೇವಗೆ ನಿತ್ಯಸತ್ಯನಿಗೆ
ಮಂಗಳವು ಸತ್ಯೇಶ ವರದಗೆ
ಮಂಗಳವು ಯುಗಯುಗದ ದೇವಗೆ
ಮಂಗಳವು ವೈಕುಂಠನಾಥಗೆ ಮಂಗಳಾತ್ಮನಿಗೆ ೬

ಈ ಕಥೆಯನಾದರಿಸಿ ಕೇಳ್ವರಿ
ಗೀ ಕೃತಿಯನೊಲುಮೆಯಲಿ ಪೇಳ್ವರಿ
ಗೀ ಕಲಿಯುಗದಿ ಸತ್ಯನಾರಾಯಣನ ಸತ್ಕೃಪೆಯು
ಏಕಕಾಲದೊಳೊದಗಿ ಸಂಕಟ
ನೂಕುವುದು ಸಕಲಾಘಬಾಧೆಯು
ಸೋಕಲಾರದು ನಿತ್ಯಸುಖವಹುದೆಂದನಾ ಸೂತ ೭

ಹರಿಹರಾದ್ಯರ ದೇವನಿಲಯವ
ವಿರಚಿಸಿದ ಫಲ ಧೇನು ಚಾಮೀ
ಕರವನೊಲಿದಿತ್ತ ಫಲ ಷೋಡಶದಾನ ಫಲವಹುದು
ಅರವಟಿಗೆಗಳ ಕೂಪಗಳ ಸಾ
ದರದಿ ನಿರ್ಮಿಸಿದ ಫಲ ಮೋದದೊ
ಳುರುತರದ ಯಾಗಫಲಮಪ್ಪುದು ಕೇಳ್ವ ಸುಜನರಿಗೆ ೮

* * *

ನ ವ ಗ್ರ ಹ ಸ್ತ ವ ನ

ರವಿ

ಲೋಕಜೀವರ ಕರ್ಮಸಾಕ್ಷಿಯ
ನೇಕವಿದ್ಯಾವೇದ್ಯ ಸಸ್ಯಾ
ನೀಕಚೇತನ ಛಾಯೆಯಾಣ್ಮನೆ ಕಶ್ಯಪಾತ್ಮಜನೆ
ಲೋಕನೇತ್ರನೆ ಕಮಲಮಿತ್ರನೆ
ಲೋಕಪೂಜ್ಯ ತಮೋಘ್ನ ಲೋಕಾ
ಲೋಕವಿಭ್ರಾಜಿತನೆ **ಭಾನುವೆ** ನಿನಗಿದೋ ನಮನ

ಶಶಿ

ವ್ಯೋಮಕೇಶಶಿರೋವಿಭೂಷಣ
ಯಾಮಿನೀಪತಿ ಓಷಧೀಶ್ವರ
ಭಾಮೆ ರೋಹಿಣಿಯರಸ ತಾರಾನಿಕರಸಂವೃತನೆ
ತಾಮರಸದಳನಯನ ನಮನನೆ
ಗೋಮಿನೀಸಹಜಾತ ಹಿಮರುಚಿ
ಕೋಮಲಾಂಗ ಶಶಾಂಕ **ಸೋಮನೆ** ನಿನಗಿದೋ ನಮನ

ಕುಜ

ಭೂರಮಾಸುತ ಮಂಗಳಾಧಿಪ
ಚಾರು ಶುಭಕರ ಕಂಬುಕಂಧರ
ಧಾರಿಣೀದಾತಾರ ಮುದ್ಗರ ಶಕ್ತಿಶೂಲಧರ
ಧೀರ ಶೋಣಾಂಬರನೆ ರಕ್ತಶ
ರೀರ ದೀನಾನಾಥಸುಜನೋ
ದ್ಧಾರ ಶೋಣಿತನಯನ **ಭೌಮನೆ** ನಿನಗಿದೋ ನಮನ

ಬುಧ

ಇಂದು ವರಸುತ ರಸಿಕವಿಬುಧಾ
ನಂದವರ್ಧಕ ಸರಸಕವಿತಾ
ವೃಂದರಚನಾಚೋದ್ಯ ಭೂಸುರವಂದ್ಯ ಸುರಸೇವ್ಯ
ಸಿಂಧುರಾನ್ವಿತ ಸಿಂಹವಾಹನ
ಬಂಧನಾಘವಿಮುಕ್ತ ವಿಮಲಾ
ನಂದ ಸರ್ವಾಭರಣ **ಸೌಮ್ಯನೆ** ನಿನಗಿದೋ ನಮನ

ಗುರು

ಅಜಕುಲಾತ್ಮಜ ದಿವಿಜತೇಜನೆ
ಯಜನರಕ್ಷಕ ನೀತಿಬೋಧಕ
ನಿಜಕರದೆ ಜಪಮಾಲೆ ದಂಡಕಮಂಡಲಾನ್ವಿತನೆ
ತ್ರಿಜಗದರ್ಚಿತ ಜ್ಞಾನಮುದ್ರಿತ
ರುಜಿನನಿರ್ಜಿತ ಶಾಸ್ತ್ರಪಂಡಿತ
ಗಜವಿರಾಜಿತ **ವಾಕ್ಪತಿಯೆ** ನೀಂ ನಿನಗಿದೋ ನಮನ

ಶುಕ್ರ

ದಾನವಾನ್ವಯಗುರುವೆ ಭಾರ್ಗವ
ಭಾನುಗುರುಪರಿಪಂಥಿ ಶಾಸ್ತ್ರ
ಜ್ಞಾನಪರಿಣತ ನೀತಿಚತುರ ಸಿತಾಂಗನೇಕಾಕ್ಷ
ದಾನವಾರಿಯ ಕರುಣಪಾತ್ರನೆ
ದೀನಪೋಷಕ ಸಕಲಸನ್ನುತ
ದಾನಿ ಕರುಣಾಂಭೋಧಿ **ಶುಕ್ರನೆ** ನಿನಗಿದೋ ನಮನ

ಶನಿ

ದಿನಪಛಾಯಾಸುತ ಯಮಾಗ್ರಜ
ವಿನುತನೀಲಾಂಬರ ಸುಮಾನ್ವಿತ
ಘನಮಹಿಮ ನೀಲಾಂಗ ರತ್ನಾಭರಣಭೂಷಿತನೆ
ಅನವರತ ತಿಲತೈಲದೀಪೋ
ದನಸಮನ್ವಿತ ಕಾಕವಾಹನ
ಮನವನರಳಿಪ ಚತುರ**ಸೌರಿಯೆ** ನಿನಗಿದೋ ನಮನ

ರಾಹು

ಸೈಂಹಿಕೇಯನೆ ಸೂರ್ಯಸೋಮ
ಗ್ರಾಹಚಿಂತಕ ರುಜಿನನಾಶಕ
ರೂಹುಗೆಟ್ಟಿಹ ಕರದೊಳುರೆ ಕರವಾಲ ಧರಿಸಿರುವ
ಬಾಹುವಿಕ್ರಮ ಸರ್ಪಭೀತರ
ಕಾಹಿ ಸುಖರ ಮಂದ ಶುಕ್ರರ
ನೇಹಿ ದೀನೋದ್ಧಾರ **ರಾಹುವೆ** ನಿನಗಿದೋ ನಮನ

ಕೇತು

ವಿಕಟಮಾಯಾರೌದ್ರಭೀಷಣ
ಸಕಲದಾನವಮಣಿ ನವಗ್ರಹ
ಸಖನೆ ಛಾಯಾಗ್ರಹನೆ ಕಿಂಶುಕಕುಸುಮಸಂಕಾಶ
ಪ್ರಕಟವಚ್ಚರಿ ಮಕುಟಭೂಷಿತ
ವಿಕಚಶಿರನಪಸವ್ಯಗಾಮಿಯೆ
ಸುಕರ ಮಂಗಳವಸನ **ಕೇತುವೆ** ನಿನಗಿದೋ ನಮನ

——

ಭಾನು ಶಶಿ ಕುಜ ಸೌಮ್ಯ ಗುರು ಕವಿ
ಭಾನು ಪುತ್ರನ ರಾಹು ಕೇತುವ
ನಾನುಪೂರ್ವಿಯೊಳೇಕಭಾವದಿ ನೆನೆದು ಸಂಸ್ತುತಿಸೆ
ಸಾನುಕೂಲ್ಯವು ಸಕಲವಾಂಛಿತ
ದಾನ ದೊರೆವುದು ದೇವಗಂಗಾ
ಸ್ನಾನ ಫಲವನು ಪಡೆದು ನಲಿವರು ಬುವಿಯ ಜೀವಿಗಳು

★★

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವಂತು

★ ★ ★

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು
ಸರ್ವಸ್ಸದ್ಬುದ್ಧಿಮಾಪ್ನೋತು ಸರ್ವಃ ಸರ್ವತ್ರ ನಂದತು

——